ಸಂಪುಟ 01 | ಸಂಚಿಕೆ 02 | ಸೋಮವಾರ 17 ನವೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಅಪಸ್ಮಾರ ದಿನ (National Epilepsy Day)**
ನರವೈಜ್ಞಾನಿಕ ಅಸ್ವಸ್ಥತೆಯ ಅಪಸ್ಮಾರದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಂಬಂಧಿತ ಕಳಂಕವನ್ನು ಕಡಿಮೆ ಮಾಡಲು ಭಾರತದಲ್ಲಿ ಪ್ರತಿ ವರ್ಷ ನವೆಂಬರ್ 17 ರಂದು ರಾಷ್ಟ್ರೀಯ ಅಪಸ್ಮಾರ ದಿನವನ್ನು ಆಚ-ರಿಸಲಾಗುತ್ತದೆ. ಮೆದುಳಿನಲ್ಲಿನ ಅಸಹಜ ವಿದ್ಯುತ್ ಚಟುವಟಿಕೆಯಿಂದಾಗಿ ಪುನರಾವರ್ತಿತ ರೋಗಗ್ರಸ್ತವಾಗುವಿಕೆಗಳಿಂದ ನಿರೂಪಿಸಲ್ಪಟ್ಟ ಅಪಸ್ಮಾರದ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಯ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡಲು ಈ ದಿನವು ವಿವಿಧ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳನ್ನು ಒಳಗೊಂಡಿದೆ?..

**2) ಅಂತರರಾಷ್ಟ್ರೀಯ ವಿದ್ಯಾರ್ಥಿ ದಿನ International Students' Day ?** ವಿದ್ಯಾರ್ಥಿಗಳ ಹಕ್ಕುಗಳಿಗೆ, ಶೈಕ್ಷಣಿಕ ಸ್ವತಂತ್ರತೆಗೆ ಸಂಬಂಧಿಸಿದಂತೆ ಬಗೆಯಾಗಿ ಆಚರಿಸುವ ದಿನ. ಎರಡನೇ ಮಹಾಯುದ್ಧದ ಸಮಯದಲ್ಲಿ ಪ್ರೇಗ್‌ನಲ್ಲಿ ನಡೆದ ಘಟನೆಗಳಿಂದಾಗಿ ನವೆಂಬರ್ 17 ಅನ್ನು ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ದಿನವನ್ನಾಗಿ ಆಯ್ಕೆ ಮಾಡಲಾಯಿತು. 1939 ರ ನವೆಂಬರ್ 17 ರಂದು ಕಾನ್ಸಂಟ್ರೇಶನ್ ಕ್ಯಾಂಪ್‌ಗಳಲ್ಲಿ ಒಂಬತ್ತು ವಿದ್ಯಾರ್ಥಿಗಳನ್ನು ಯಾವುದೇ ಕುರುಹು ಇಲ್ಲದೆ ಗಲ್ಲಿಗೇರಿಸಲಾಯಿತು. ಇತ್ತೀಚಿನ ದಿನಗಳಲ್ಲಿ, ನವೆಂಬರ್ 17 ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಬಹುಸಂಸ್ಕೃತಿಯ ಆಚರಣೆಯನ್ನು ಸೂಚಿಸುತ್ತದೆ.

**3) ವಿಶ್ವಪ್ರಿಮೆಚುರಿಟಿ ದಿನ WorldPrematurityDay?**
ಅಸಮಯದಲ್ಲಿ ಜನಿಸಿದ ಶಿಶುಗಳಿಂದ ಬೇರ್ಪಡುವ ಸವಾಲುಗಳಿಗೆ ಜಾಗೃತಿ ಮೂಡಿಸುವ ದಿನ. ಅಕಾಲಿಕ ಶಿಶುಗಳು ಎದುರಿಸುವ ಸವಾಲುಗಳು ಮತ್ತು ಗುಣಮಟ್ಟದ ನವಜಾತ ಶಿಶು ಆರೈಕೆಯ ನಿರ್ಣಾಯಕ ಅಗತ್ಯದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ನವೆಂಬರ್ 17 ರಂದು ವಿಶ್ವ ಅಕಾಲಿಕ ಶಿಶು ದಿನವನ್ನು ಆಚರಿಸಲಾಗುತ್ತದೆ. ಈ ದಿನದ ಸಂದರ್ಭದಲ್ಲಿ, ತಮ್ಮ ಅಕಾಲಿಕ ಮಕ್ಕಳಿಗೆ ಸಾಧ್ಯವಾದಷ್ಟು ಉತ್ತಮ ಆರೈಕೆಯನ್ನು ಒದಗಿಸಲು ಹೆಣಗಾಡುತ್ತಿರುವ ಕುಟುಂಬಗಳ ಪ್ರಬಲ ಕಥೆಗಳು ಹೊರಹೊಮ್ಮುತ್ತವೆ.

**4) * ಲಾಲಾ ಲಜಪತ್ ರಾಯ್ ಪುಣ್ಯತಿಥಿ (Lala Lajpat Rai Punyatithi):**
ಭಾರತದ ಸ್ವಾತಂತ್ರ?ಯ್ ಹೋರಾಟಗಾರರಾದ 'ಪಂಜಾಬ್ ಕೇಸರಿ' ಲಾಲಾ ಲಜಪತ್ ರಾಯ್ ಅವರ ಪುಣ್ಯತಿಥಿ. 'ನನ್ನ ಜೀವನದಲ್ಲಿ ತುಂಬ ಸಮಸ್ಯೆಗಳಿದ್ದವು. ಆದರೆ ಅವು ನನ್ನ ತುಟಿಗಳಿಗೆ ಗೊತ್ತಿರಲಿಲ್ಲ. ಅವು ಸದಾಕಾಲ ನಗುತ್ತಿದ್ದವು.'

## ಸುಭಾಷಿತ

'ನನ್ನ ಜೀವನದಲ್ಲಿ ತುಂಬ ಸಮಸ್ಯೆಗಳಿದ್ದವು.
ಆದರೆ ಅವು ನನ್ನ ತುಟಿಗಳಿಗೆ ಗೊತ್ತಿರಲಿಲ್ಲ.
ಅವು ಸದಾಕಾಲ ನಗುತ್ತಿದ್ದವು.'

ಚಾರ್ಲಿ ಚಾಪ್ಲಿನ್

# ಸಚಿವ ಸಂಪುಟ ಪುನಾರಚನೆ:

## ಮಂತ್ರಿಗಿರಿ ಗಿಟ್ಟಿಸಿಕೊಳ್ಳಲು ಶಾಸಕರ ದೆಹಲಿ ಯಾತ್ರೆ

**ಬೆಂಗಳೂರು: ಸಚಿವ ಸಂಪುಟ ಪುನರ್‌ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಹಸಿರು ನಿಶಾನೆ ತೋ-ರಿಸಿರುವ ಹಿನ್ನೆಲೆಯಲ್ಲಿ ಅವಕಾಶ ಗಿಟ್ಟಿಸಲು ಶಾಸಕರು ದೆಹಲಿಯಾತ್ರೆ ಆರಂಭಿಸಿದರೆ, ಹಾಲಿ ಸಚಿವ-ರಿಗೆ ಹುದ್ದೆ ಕಳೆದುಕೊಳ್ಳುವ ಆತಂಕ ಹೆಚ್ಚಾಗಿದೆ.**



ಬಿಹಾರ ವಿಧಾನಸಭೆ ಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ನಿನ್ನೆ ಸಿದ್ದರಾಮಯ್ಯ ಅವರ ದೆಹಲಿ ಭೇಟಿಯ ವೇಳೆ ಹೆಚ್ಚಿನ ಚರ್ಚೆಯಾಗಿಲ್ಲ. ಆದರೆ, ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿದ ವೇಳೆ ಸಂಪುಟ ಪುನರ್‌ರಚನೆಗೆ ಹಸಿರು ನಿಶಾನೆ ತೋರಿಸಿದ್ದಾರೆ ಎಂದು ಹೇಳಲಾಗಿದೆ. ಸರ್ಕಾರ ಎರಡೂವರೆ ವರ್ಷ ಪೂರೈಸಿ ರುವ ಹಿನ್ನೆಲೆಯಲ್ಲಿ ಸಂಪುಟ ಪುನರ್‌ರಚನೆ ಕೈಗೊಳ್ಳ ಬಹುದು ಎಂದು ರಾಹುಲ್‌ಗಾಂಧಿ ಹೇಳಿದ್ದು, ಇನ್ನು ಮುಂದೆ ಯಾರನ್ನು ಕೈಬಿಡಬೇಕು ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಚರ್ಚೆಗಳು ನಾಳೆಯಿಂದ ಆರಂಭವಾಗಲಿವೆ.

ನಿನ್ನೆ ರಾತ್ರಿಯೇ ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ ಸಂಜೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರನ್ನು ಭೇಟಿ ಮಾಡಿದ ವೇಳೆ ಸಲ್ಲಿಸಬೇಕಾದ ಮನವಿ ಪತ್ರ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲೇ ಬೀಡು ಬಿಟ್ಟಿದ್ದು, ರಾಜಕೀಯ ಚರ್ಚೆ ನಡೆಸುತ್ತಿದ್ದಾರೆ. ನಾಳೆ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡುತ್ತಿದ್ದು, ಹೈಕಮಾಂಡ್ ನಾಯಕರ ಜೊತೆ ಮಹತ್ವದ ಮಾತುಕತೆ ನಡೆಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಅವರ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶಾಸಕರಾದ ಪಿ.ಎಂ ಅಶೋಕ್. ಎ.ಎಸ್.ಪೊನ್ನಣ್ಣ, ಬಸವರಾಜ ರಾಯರೆಡ್ಡಿ, ಅಪ್ಪಾಜಿನಾಡಗೌಡ ಮತ್ತಿತರರು ಮುಖ್ಯಮಂತ್ರಿ ಅವರ ಜೊತೆ ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ಸಚಿವ ಸ್ಥಾನ ಗಿಟ್ಟಿಸಲು ಲಾಬಿ ನಡೆಸುತ್ತಿದ್ದಾರೆ. ಜೇವರ್ಗಿ ಶಾಸಕ ಅಜಯ್‌ಸಿಂಗ್, ದಿಢೀರ್ ದೆಹಲಿಗೆ ತೆರಳಿದ್ದು ವರಿಷ್ಠರನ್ನು ಮನವೊಲಿಸಿ ಅವಕಾಶ ಗಿಟ್ಟಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಸಚಿವ ಸಂಪುಟ ಪುನರ್‌ರಚನೆಯಲ್ಲಿ ಬಹಳಷ್ಟು ಮಂದಿ ಸಚಿವರನ್ನು ಕೈ ಬಿಡುವ ಸಾಧ್ಯತೆಯೂ ಇದೆ. ಮೂಲಗಳ ಪ್ರಕಾರ ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಶರಣಬಸಪ್ಪ ದರ್ಶನಪುರ್, ಶಿವಾನಂದ ಪಾಟೀಲ್, ಆರ್.ಬಿ. ತಿಮಾಪುರ್, ಡಾ. ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ರಹೀಂಖಾನ್, ಡಿ. ಸುಧಾಕರ್ ಅವರು ಅವಕಾಶ ಕಳೆದುಕೊಳ್ಳುವ ಸಾಧ್ಯತೆ ಇದೆ.


ಈ ಹಿನ್ನೆಲೆಯಲ್ಲಿ ಕೆಲವು ಸಚಿವರು ದೆಹಲಿಗೆ ಭೇಟಿ ನೀಡುತ್ತಿದ್ದು ಕುರ್ಚಿ ಭದ್ರಪಡಿಸಿಕೊಳ್ಳಲು ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಚಿವ ಸಂಪುಟ ಪುನರ್ ರಚನೆ ಹಸಿರು ನಿಶಾನೆ ಸಿಕ್ಕಿರುವ ಹಿನ್ನೆಲೆಯಲ್ಲಿ ನಾಯಕತ್ವದ ಚರ್ಚೆ ನೇಪಥ್ಯಕ್ಕೆ ಸರಿದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನ ಅಭಾದಿತ ಎನ್ನಲಾಗುತ್ತಿದೆ. ಮೂಲಗಳ ಪ್ರಕಾರ ಹೈಕಮಾಂಡ್ ಒಪ್ಪಿದರೂ ಸ್ಥಳೀಯ ಪರಿಸ್ಥಿತಿಯಲ್ಲಿ ಸಂಪುಟ ಪುನರ್‌ರಚನೆ ಕಷ್ಟಸಾಧ್ಯ ಎನ್ನಲಾಗುತ್ತಿದೆ. ರಾಜ್ಯ ರಾಜಕಾರಣದಲ್ಲಿ ಮೂರ್ನಾಲ್ಕು ಶಕ್ತಿ ಕೇಂದ್ರಗಳು ಸೃಷ್ಟಿಯಾಗಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಪುಟ ಪುನರ್‌ರಚನೆಯ ಪರಮಾಧಿಕಾರ ಇದ್ದರೂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಟ್ಟಿಯನ್ನು ಸಮದೂಗಿಸಬೇಕಿದೆ. ಕಳೆದ ಎರಡೂವರೆ ವರ್ಷಗಳಿಂದ ನಿಗಮ ಮಂಡಳಿಗಳಿಗೆ ಸದಸ್ಯರು ಹಾಗೂ ನಿರ್ದೇಶಕರನ್ನು ನೇಮಿಸಲು ಸಾಧ್ಯವಾಗಿಲ್ಲ.

# ಪಶ್ಚಿಮ ಬಂಗಾಳದಲ್ಲಿ SIRಗೆ ಚುನಾವಣಾ ಆಯೋಗ ಸಿದ್ಧತೆ

**❑ ನೈಜ್ಯ ದೆಸೆ ನ್ಯೂಸ್**

**ಕೋಲ್ಕತ್ತಾ: ಮುಂದಿನ 5 ತಿಂಗಳಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳದ ಚುನಾವಣೆಗೆ ಸಿದ್ದತೆ ಆರಂಭಗೊಂಡಿದೆ. ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಅಗರ್ವಾಲ್ ಅವರು ಎಲ್ಲಾ ಜಿಲ್ಲಾ ಚುನಾವಣಾ ಅಧಿಕಾ-ರಿಗಳಿಗೆ ವಿಶೇಷ ಮತಪಟ್ಟಿ ಪರಿಷ್ಕರಣೆ ಕಾರ್ಯ ಪೂರ್ಣಕ್ಕೆ ಸೂಚನೆ ನೀಡಿದ್ದು ಜನರಿಗೆ ನೀಡಿರುವ ಮತದಾನ ಫಾರ್ಮ್‌ಗಳನ್ನು ಈ ತಿಂಗಳೊಳಗೆ ಸಂಗ್ರಹಹಿಸಲು ನಿರ್ದೇಶನ ನೀಡಿದ್ದಾರೆ.**



ಜಿಲ್ಲಾ ಅಧಿಕಾರಿಗಳೊಂದಿಗೆ ನಡೆದ ವೀಡಿಯೊ ಸಮೇಳನದಲ್ಲಿ ಈ ಸೂಚನೆಗಳನ್ನು ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ನವೆಂಬರ್ ಅಂತ್ಯದೊಳಗೆ ಜಿಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ. ರಾಜ್ಯದಲ್ಲಿ 7.55 ಕೋಟಿಗೂ ಹೆಚ್ಚು ಎಣಿಕೆ ಫಾರ್ಮ್‌ಗಳನ್ನು (ಶೇಕಡಾ 98.5) ವಿತರಿಸಲಾಗಿದೆ ಎಂದು ಅವರು ಹೇಳಿದರು.ಸಭೆಯಲ್ಲಿ, ಫಾರ್ಮ್‌ಗಳ ವಿತರಣೆ ಏಕೆ ಇನ್ನೂ ಶೇಕಡಾ 100 ರಷ್ಟು ತಲುಪಿಲ್ಲ ಎಂದು ಅಗರ್ವಾಲ್ ಪ್ರಶ್ನಿಸಿದರು. ಯಾವುದೇ ಲೋಪ ಸಹಿಸಲಾಗುವುದಿಲ್ಲ ಎಂದು ಜಿಲ್ಲಾ ಅಧಿಕಾರಿಗಳಿಗೆ ತಿಳಿಸಲಾಗಿದೆ. ಇದಲ್ಲದೆ ಸ್ಥಳೀಯ ಸಮಸ್ಯೆಗಳನ್ನು ತಕ್ಷಣ ಪರಿಹರಿಸಲು ಅವರಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ಚುನಾವಣಾ ಆಯೋಗವು ಫಾರ್ಮ್‌ಗಳ ಸಂಗ್ರಹವನ್ನು ಯಾವುದೇ ದುಷ್ಕೃತ್ಯವಿಲ್ಲದೆ ಸುಗಮವಾಗಿ ಮತ್ತು ಶಾಂತಿಯುತವಾಗಿ ನಡೆಸಬೇಕು ಎಂದು ಸ್ಪಷ್ಟಪಡಿಸಿದೆ. ಈ ಪ್ರಕ್ರಿಯೆಯಲ್ಲಿ ಮತದಾರರೊಂದಿಗೆ ಅನುಚಿತವಾಗಿ ವರ್ತಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು. ಇದರ ನಡುವೆ ಸಿಬ್ಬಂದಿಗಳ ಬಿಎಲ್‌ಒಗಳ ಜಂಟಿ ವೇದಿಕೆಯು ಸಿಇಒಗೆ ಅವರ ಸುರಕ್ಷತೆಯ ಬಗ್ಗೆ ಲಿಖಿತ ದೂರನ್ನು ಸಲ್ಲಿಸಿದೆ.

# ನಗರ ಕೇಂದ್ರ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ದಿನಾಚರಣೆ

**❑ ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನವೆಂಬರ್ 16 (ಕರ್ನಾಟಕ ವಾರ್ತೆ): ನವೆಂಬರ್ 14 ರಿಂದ ನವೆಂಬರ್ 20ರವರೆಗೆ ಆಚರಿಸಲ್ಪಡುವ ರಾಷ್ಟೀಯ ಗ್ರಂಥಾಲಯ ಸಪ್ತಾಹವನ್ನು ನಗರದ ನಗರ ಕೇಂದ್ರ ಗ್ರಂಥಾಲಯದ ಕಚೇರಿಯಲ್ಲಿ ಇತ್ತೀಚೆಗೆ ಆಚರಿಸಲಾಯಿತು.**




ಜವಾಹರಲಾಲ್ ನೆಹರು ಅವರ ಜನ್ಮದಿನದ ಅಂಗವಾಗಿ ಮಕ್ಕಳ ದಿನಾಚರಣೆ ಹಾಗೂ ಪುಸ್ತಕ ಪ್ರದರ್ಶನ ಕಾರ್ಯಕ್ರಮ ಕೂಡ ನಡೆಯಿತು. ಮುಖ್ಯ ಗ್ರಂಥಾಲಯಾಧಿಕಾರಿ ನಿರ್ಮಲಾ ಹೆಚ್ ಹೊಸೂರು ಅವರು ಜವಾಹರಲಾಲ್ ನೆಹರು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಗ್ರಂಥಾಲಯದಲ್ಲಿ ಓದುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಮತ್ತು ಮಡ್ಡಿಪೇಟೆಯ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರಬಂಧ, ಚಿತ್ರಕಲೆ, ರಂಗೋಲಿ ಸ್ಪರ್ಧೆ, ಭಾವಗೀತೆ, ಜನಪದ ಗೀತೆ ಹಾಗೂ ಇನ್ನಿತರ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಿಬ್ಬಂದಿ ರಾಘವೇಂದ್ರರಾವ್ ಕೆ, ಮರೆಪ್ಪ, ರಾಜಶ್ರೀ ಎಸ್., ಸಣ್ಣ ತಿಮಲಮ್ಮ, ಮಾರ್ತಮ್ಮ, ಪದ್ಮಾವತಿ, ಪಾಂಡುರಂಗ, ವಿನೋದಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಶಾಸಕ ದದ್ದಲ್‌ಗೆ ಸಚಿವ ಸ್ಥಾನ ನೀಡಲು ನಿಂಗಯ್ಯ ನಾಯಕ್ ಒತ್ತಾಯ

**❑ ನೈಜ್ಯ ದೆಸೆ ನ್ಯೂಸ್**

**'ರಾಯಚೂರು ಗ್ರಾಮಾಂತರ ಕ್ಷೇತ್ರದಶಾಸಕರು ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ನಿಗಮದ ಅಧ್ಯಕ್ಷರಾದ ಬಸನಗೌಡ ದದ್ದಲ್ ಅವರಿಗೆ ಕಾಂಗ್ರೇಸ್ ಹೈಕಮಾಂಡ್,ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರು ಸಚಿವ ಸ್ಥಾನ ನೀಡಬೇಕು' ಎಂದು ಶ್ರೀ ಭಗವಾನ್ ಮಹರ್ಷಿ ವಾಲ್ಮೀಕಿ ಯುವ ಬ್ರಿಗೇಡ್‌ನ ರಾಜ್ಯ ಅಧ್ಯಕ್ಷರಾದ ಲಿಂಗಯ್ಯನಾಯಕ್ ಸೈದಾಪುರ ಅವರು ಒತ್ತಾಯಿಸಿದ್ದಾರೆ.**

'ಗ್ರಾಮಾಂತರ ಕ್ಷೇತ್ರದ ರೈತರ ಸಮಸ್ಯೆಗಳಾದ ನೀರಾವರಿ,ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸೇರಿ ಮೂಲಭೂತ ಸೌಕರ್ಯಗಳ ಒದಗಿಸುವಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯ ಮತ್ರಿ ಡಿ.ಕೆ.ಶಿವಕುಮರವರ ಮೇಲೆ ಒತ್ತಡ ಹಾಕಿ ಕ್ಷೇತ್ರದ ಅಭಿವೃದ್ಧಿಗೆ ಸದಾ ಮುಂದಾಗಿರುವ ಇವ-ರಿಗೆ ಸಚಿವ ಸ್ಥಾನ ನೀಡುವುದ-ರಿಂದ ರಾಯಚುರು ಜಿಲ್ಲೆಯಲ್ಲಿ ಇನ್ನಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಬಹುದಾಗಿದೆ'



'ರಾಜ್ಯದ ವಾಲ್ಮೀಕಿ ನಾಯಕಸಮುದಾಯದ ಪ್ರತಿನಿಧಿಯಾಗಿ ಪಕ್ಷ ಹಾಗೂ ಸರ್ಕಾರ ನೀಡಿದ ಜವಾಬ್ದಾರಿಯನ್ನು ನಿಭಾಯಿಸುವ ಸಾಮಥ-'ವನ್ನು ಹೊಂದಿದ್ದು ಅನೇಕ ಸಮಾವೇಶ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವ ಮೂಲಕ ಪಕ್ಷಕ್ಕೆ ಬದ್ದತೆ ತೋರಿಸಿದ್ದಾರೆ.

ಕರ್ನಾಟಕ ವಾಲ್ಮೀಕಿ ನಾಯಕ ಸಮಾಜದ ಹಿತಕ್ಕಾಗಿ ಶ್ರೀ ಮಹರ್ಷಿ ವಾಲ್ಮೀಕಿ ನಿಗಮದ ಮುಲಕ ಹಲವಾರು ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಅಲ್ಲದೆ ರಾಯಚೂರು ಗ್ರಾಮೀಣ ಕ್ಷೇತ್ರವನ್ನು ಪ್ರತಿನಿಧಿಸಿ ಜನತೆಯ ಪ್ರೀತಿ ಪಾತ್ರರಾಗಿ ಎರಡನೇ ಅವದಿಗೆ ಶಾಸಕರಾಗಿ ಪುನರಾಯ್ಕೆ ಆಗಿದ್ದಾರೆ. ಹಿಗಾಗಿ ಹೈಕಮಾಂಡ್ ಶಾಸಕ ಬಸನಗೌಡ ದದ್ದಲ್ ಅವರ ಬದ್ದತೆ ಪರಿಗಣಿಸಿ, ವಾಲ್ಮೀಕಿನಾಯಕ ಸಮಾಜದ ಪ್ರತಿನಿಧಿಯನ್ನಾಗಿ ಪರಿಗಣಿಸಿಮುಂದಿನ ಸಚಿವ ಸಂಪುಟದ ವಿಸ್ತರಣೆಯಲ್ಲಿ ಸಚಿವ ಸ್ಥಾನ ನಿಡುವ ಮುಲಕ ಜಿಲ್ಲೆಯಲ್ಲಿ ಜಿಲ್ಲೆಯಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸಲು,ಕಾರ್ಯಕರ್ತರಿಗೆ ಉತ್ಸಾಹತುಂಬಲು ಮುಂದಾಗಬೇಕು ಎಂದು ಲಿಂಗಯ್ಯ ನಾಯಕ್ ಒತ್ತಾಯಿಸಿದ್ದಾರೆ.

# ಆರೋಗ್ಯ ಶಿಬಿರ, ಕಾನೂನು ಸಾಕ್ಷರತೆಯಲ್ಲಿ ಮಾಜಿ ದೇವದಾಸಿಯರು ಸಕ್ರಿಯ ಭಾಗಿ

**ರಾಯಚೂರು: ನವೆಂಬರ್ 15 (ಕ.ವಾ.): ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಜಿಲ್ಲಾಡಳಿತ ಮತ್ತು ಜಿಲ್ಲಾ ವಕೀಲರ ಸಂಘದ ಸಹಯೋಗದಲ್ಲಿ ನವೆಂಬರ್ 15ರಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ರಾಯಚೂರು ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ಧ ಮಾಜಿ ದೇವದಾಸಿಯರು ಸಕ್ರಿಯ ಭಾಗಿಯಾದರು.**




ಗೌರವಾನ್ವಿತ ನ್ಯಾಯಮೂರ್ತಿಗಳಾದ ವಿಭು ಬಖ್ರು, ಎಂ.ಜಿ. ಶುಕುರೆ ಕಮಲ್, ಅನು ಸಿವರಾಮನ್, ಹೈಕೋರ್ಟ್ನ ರಿಜಿಸ್ಟ್ರಾರ್ ಜನರಲ್ ಕೆ.ಎಸ್. ಭರತ್ ಕುಮಾರ ಹಾಗೂ ಇನ್ನೀತರರು ಪೂರ್ವ ನಿಗದಿಯಂತೆ ಬೆಳಗ್ಗೆ ಸರಿಯಾಗಿ 9.30ಕ್ಕೆ ಜಿಲ್ಲಾ ರಂಗಮಂದಿರದತ್ತ ಆಗಮಿಸುತ್ತಿದ್ದಂತೆ ಡೊಳ್ಳುಕುಣಿತ ಹಾಗೂ ಮಹಿಳೆಯರ ಪೂರ್ಣಕುಂಭದ ಮೂಲಕ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು. ಕಾರ್ಯಕ್ರಮದಲ್ಲಿ, ಮೊದಲಿಗೆ ನ್ಯಾಯಮೂರ್ತಿಗಳು ಮಳಿಗೆ ಉದ್ಘಾಟಿಸಿ ವೀಕ್ಷಣೆ ಮಾಡಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ವಕೀಲರ ಸಂಘ ಜಂಟಿಯಾಗಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಿದ್ದಕ್ಕೆ ನ್ಯಾಯಮೂರ್ತಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿಮುಕ್ತಿ ದೇವದಾಸಿ ಸಂಘ, ಜಿಲ್ಲಾ ಪೊಲೀಸ್ ಇಲಾಖೆ, ಕೃಷಿ-ತೋಟಗಾ-ರಿಕಾ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಪ್ರಾದೇಶಿಕ ಸಾರಿಗೆ ಇಲಾಖೆ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶಾಲಾ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಕಂದಾಯ ಇಲಾಖೆ, ಹಿರಿಯ ನಾಗರಿಕರ ವಿಕಲಚೇತನರ ಕಲ್ಯಾಣ ಇಲಾಖೆ, ಸ್ವಸಹಾಯ ಸಂಘಗಳಿಂದ ಮಳಿಗೆ ಅಳವಡಿಸಿ ನಾನಾ ಯೋಜನೆಗಳ ಕರಪತ್ರ ವಿತರಿಸಿ ಮಾಜಿ ದೇವದಾಸಿ ಮಹಿಳೆಯರಿಗೆ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಅರಿವು ಮೂಡಿಸಲಾಯಿತು.

ಆರೋಗ್ಯ ತಪಾಸಣೆ: ವಿಶೇಷವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಐದಾರು ಸ್ಟಾಲಗಳನ್ನು ಅಳವಡಿಸಿ ಮಾಜಿ ದೇವದಾಸಿ ಮಹಿಳೆಯರಿಗೆ ಕಣ್ಣು, ರಕ್ತದೊತ್ತಡ, ಮದುಮೇಹ ಸೇರಿದಂತೆ ಆರೋಗ್ಯ ತಪಾಸಣೆ ನಡೆಸಲಾಯಿತು. ಸ್ಥಳದಲ್ಲೇ ಬಿ.ಪಿ., ಸೂಗರ್ ಪರೀಕ್ಷೆಗೆ ಮತ್ತು ಔಷಧಿ ವಿತರಣೆಗೆ ವ್ಯವಸ್ಥೆ ಮಾಡಲಾಗಿತ್ತು. ವೇದಿಕೆ ಕಾರ್ಯಕ್ರಮದಲ್ಲಿ ಮೊದಲಿಗೆ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಾಜಿ ದೇವದಾಸಿ ಮಹಿಳೆಯರಿಂದಲೇ ಎಲ್ಲ ನ್ಯಾಯಮೂರ್ತಿಗಳಿಗೆ, ನ್ಯಾಯಾಧೀಶರಿಗೆ ಸನ್ಮಾನ ನೆರವೇರಿಸಿದ್ದು, ವಿಶೇಷವಾಗಿತ್ತು. ಗಾಯಕಿ ಮಹಾಲಕ್ಷ್ಮಿ ಅವರ ಪ್ರಾರ್ಥನೆಯೊಂದಿಗೆ ವೇದಿಕೆ ಕಾರ್ಯಕ್ರಮ ಆರಂಭವಾಯಿತು. ವಸುಂಧರಾ ಮತ್ತು ಯಶೋಧಾ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಊಟದ ವ್ಯವಸ್ಥೆ: ಕಾರ್ಯಕ್ರಮಕ್ಕೆ ಆಗಮಿಸಿದ್ಧ ಮಾಜಿ ದೇವದಾಸಿ ಮಹಿಳೆಯರು ಮತ್ತು ಸಾರ್ವಜನಿಕ-ರಿಗೆ ಸಮಾಜ ಕಲ್ಯಾಣ ಇಲಾಖೆಯ ಆವರಣದಲ್ಲಿ ಅಚ್ಚುಕಟ್ಟಾದ ಊಟದ ವ್ಯವಸ್ಥೆ ಮಾಡಲಾಗಿತ್ತು.

## ಸಾಹಿತ್ಯ ಸಿಂಚನ

ಕಣ್ಣ ಕಾಡಿಗೆಯ ಕಪ್ಪು ಕರೆದಿದೆ
ನಲ್ಲನ ನಯನದಿ ನುಲಿದು
ಮನದರಸಿಯ ಮಾತಿನ ಮೋಡಿ
ಮಲ್ಲಿಗೆಯಂತೆ ಮೃದುವಾದ ಮಹಲ್!!

ಪ್ರೇಮ ಪಲ್ಲಕ್ಕಿಯಲ್ಲಿ ಪ್ರೇಮಿಗಳ
ಪ್ರೀತಿ ಪ್ರೇಮೋತ್ಸವದ ಪ್ರಣಯಗೀತೆ
ರಂಗು ರಂಗಾದ ರಮಣೀಯ ರಾಗ
ಹಾಡಿದರು ಹವಣಿಸಿ ಹಂಗಾಮದಿ!!

ಬಾಳಲಿ ಬೆಳಕಾಗಿ ಬಂದವಳು
ಸರಳ ಸಜ್ಜನಿಕೆಯ ಸೌಜನ್ಯ
ಸಂಭ್ರಮ,ಸಂತಸ,ಸಡಗರದಿಂದ
ಹರ್ಷದ ಹೊನಲು ಹರಸಿದಳು!!

ವರ್ಣನೆಗೆ ವಸಿಯಾಗದ ವನಿತೆ
ಬಾಳು ಬಂಗಾರವಾದ ಭಾವಗೀತೆ
ಮನದ ಮೌನ ಮುರಿದ ಮನದನ್ನೆ
ಕಣಕಣದಲ್ಲಿ ಕಲಿತು ಕವಿತೆಯಾದಳು!!

ಶ್ರೀಮತಿ ಕವಿತಾ
ಚನ್ನಬಸವ ಹಿರೇಮಠ ಕವಿತಾಳ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕಬ್ಬಿಣದ ಕವಚದ ರಾಕೆಟ್ ಇಡೀ ರಾಷ್ಟ್ರಕ್ಕೆ ಪರಿಚಯಿಸಿದ ಕೀರ್ತಿ ಮೈಸೂರು ಹುಲಿ ಟಿಪ್ಪು ಸುಲ್ತಾನ್ ರವರಿಗೆ ಸಲ್ಲುತ್ತದೆ ಶಾಸಕ ಹಂಪಯ್ಯ ನಾಯಕ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದಲ್ಲಿ ಈ ದಿನ ಹಜರತ್ ಮೈಸೂರು ಹುಲಿ ಟಿಪ್ಪು ಸುಲ್ತಾನ್ ರವರ 275 ನೇಯ ಜಯಂತಿಯನ್ನು ಉದ್ಘಾಟಿಸಿದ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ ಹಂಪಯ್ಯ ನಾಯಕ್ ಸಾಹುಕಾರ್ ಇವರು.

ಉದ್ಘಾಟನಾ ನುಡಿಯನ್ನು ನೋಡಿದ ಮಾನ್ಯ ಶಾಸಕರು ಹಜರತ್ ಮೈಸೂರು ಹುಲಿ ಟಿಪ್ಪು ಸುಲ್ತಾನರು ಹೆಸರಿಗೆ ತಕ್ಕ ಹುಲಿಯಾಗಿ ಘರ್ಜನೆಯೊಂದಿಗೆ ಬ್ರಿಟಿಷರ ವಿರುದ್ಧ 4 ಸಾರಿ ಯುದ್ಧವನ್ನು ಮಾಡಿ ದೇಶ ಹಾಗೂ ರಾಜ್ಯವನ್ನು ಸಂರಕ್ಷಿಸಿದ ರಾಜರು ಟಿಪ್ಪುರವರು ಕೇವಲ ತಮ್ಮ ಸಮುದಾಯದವಲ್ಲದೆ ಸಮಸ್ತ ಸಮಾಜದ ನಾಯಕರಾಗಿ ಹೊರಹೊಮ್ಮಿದ್ದರು. ಮೈಸೂರು ಸಂಸ್ಥಾನದ ವ್ಯಾಪ್ತಿಯಲ್ಲಿ ಬರುವ ಸುಮಾರು 39000 ಕೆರೆಗಳಿಗೆ ಹಾಗೂ 10,000 ಭಾವಿಗಳಿಗೆ ಪರಿಶಿಷ್ಟ ಜಾತಿಯ ಜನರನ್ನು ಸಂರಕ್ಷಣೆಗೋಸ್ಕರ ಮೀಸಲಿರಿಸಿ ನೀರು ಗಂಟೆಯ ರನ್ನಾಗಿ ಮಾಡಿ ಆ ಸಮಯದಲ್ಲಿ



ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಹೋರಾಡಿದ ಮಹಾನ್ ವೀರರು.

ಕಬ್ಬಿಣದ ಕವಚದ ರಾಕೆಟ್ ಗಳನ್ನು ತಯಾರಿಸಿ ಇಡೀ ರಾಷ್ಟ್ರಕ್ಕೆ ಆ ಸಂದರ್ಭದಲ್ಲಿ ರಾಕೆಟ್ ಗಳನ್ನು ಪರಿಚಯಿಸಿದ ಕೀರ್ತಿ ಇವ–ರಿಗೆ ಸಲ್ಲುತ್ತದೆ. ರೇಷ್ಮೆ ನೂಲನ್ನು ಇಡೀ ರಾಜ್ಯಕ್ಕೆ ಪರಿಚಯಿಸಿದರು, ಭೂ ಕಂದಾಯ ನೀತಿಯನ್ನು ಜಾರಿಗೆ ತಂದರು, ಚನ್ನಪಟ್ಟಣದಲ್ಲಿ ಆಟಿಕೆ ಸಾಮಾನುಗಳನ್ನು ಆ ಸಂದರ್ಭದಲ್ಲಿ ಪರಿಚಯಿಸಿದರು. ಕೇರಳದ ಮಲಬಾರಿನ ಹೆಣ್ಣುಗಳ ಮಾನ ಮುಚ್ಚಲು ರೇಷ್ಮೆ ವಸ್ತ್ರಗಳನ್ನೇ ದಾನ ಮಾಡಿದ ಕೀರ್ತಿ ಇವರದು ಮತ್ತು ಸ್ಥಾನ ತೆರಿಗೆಗಳನ್ನು ರದ್ದುಗೊಳಿಸಿದ ಮಹಾನ್ ವ್ಯಕ್ತಿತ್ವ ಹೊಂದಿದ ಟಿಪ್ಪು ಅವರು ಇಂದಿನ ಮೈಸೂರು ಜಿಲ್ಲೆಯ KRS ಜಲಾಶಯಕ್ಕೆ ಆ ದಿನಮಾನಗಳಲ್ಲಿ ಶಂಕುಸ್ಥಾಪನೆಯನ್ನು ನೆರವೇರಿಸಿದ ಕೀರ್ತಿ ಇವರದು ಇಂತಹ ಮಹಾನ್ ನಾಯಕರ ಜಯಂತಿಗಳನ್ನು ಮಾಡುವುದರ ಮೂಲಕ ಮುಂದಿನ ಪೀಳಿಗೆಗೆ ಇವರ ಪರಿಚಯ ಇವರು ಮಾಡಿರ್ತಕಂತ ಸಾಧನೆಗಳನ್ನು ನಾವು ನೀವೆಲ್ಲರೂ ತೋರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ ಎಂಬುದನ್ನು ನಾವು ತಿಳಿಯಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರೆಂಟಿಗಳ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ಮಾಜಿ ಶಾಸಕರಾದ ರಾಜ ವೆಂಕಟಪ್ಪ ನಾಯಕ್, ಸೈಯದ್ ಖಾಲಿದ್ ಖಾದ್ರಿ, ಟಿಪ್ಪು ಸುಲ್ತಾನ್ ಸಂಘದ ರಾಜ್ಯ ಸಂಚಾಲಕರಾದ ಸಯ್ಯದ್ ಹುಸೇನ್, ರಾಜ ಸುಭಾಷ್ ಚಂದ್ರ ನಾಯಕ್, ಸೈಯದ್ ಅಕ್ಬರ್ ಪಾಷಾ ಗುತ್ತೇದಾರರು, ಪುರಸಭೆ ಮಾಜಿ ಅಧ್ಯಕ್ಷರುಗಳಾದ ಮಹಮ್ಮದ್ ಇಸ್ಮಾಯಿಲ್,ಜಿಲಾನಿ ಖುರೇಶಿ, ಪುರಸಭೆ ಸದಸ್ಯರುಗಳಾದ ಸಾಬೀರ್ ಹುಸೇನ್, ಶೇಕ್ ಜಮೀಲ್ ಅಹಮದ್, ಭಾಷಾ ಸಾಬ್ ಟೈಲರ್, ಖಾಲಿಲ್ ಕುರೇಶಿ, ಎಚ್ ಬಿ ಎಂ ಬಾಷಾ, ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾದ ಸೈಯದ್ ಫಯಾಜೋದ್ದೀನ್, ಚಾಂದ್ ಪಾಷಾ ಗುತ್ತೇದಾರ್, ಮಹೆಮ್ಮದ್,ಸತ್ತರ್ ಬಂಗ್ಲೆವಾಲೆ, ರಸುಲ್ ಖುರೇಶಿ, ಖಾದಿರ್ ನಾಯ್ಕ್, ಶೇಕ್ ಮಹಿಬೂಬ್, ಟಿಪ್ಪು ಸುಲ್ತಾನ್ ಸಂಘದ ಅಧ್ಯಕ್ಷರಾದ ಮಹಿಬೂಬ್ ಕುರಿಷಿ, ಇನ್ನು ಮುಂತಾದವರು ಉಪಸ್ಥಿತರಿದ್ದರು.

# ಮಕ್ಕಳಲ್ಲಿ ನಾಡಿನ ಜವಾಬ್ದಾರಿಯ ಅರಿವು ಮೂಡಿಸುವ ಕಾರ್ಯಕ್ರಮ




❑ ನೈಜ್ಯ ದೆಸೆ ನ್ಯೂಸ್

ಆಶ್ರಮದ ವತಿಯಿಂದ ಇಂದು "ವಿವೇಕ ಪಥ ರಾಷ್ಟ್ರದ ಹಿತ " ಮೂರನೇ ಕಾರ್ಯಕ್ರಮವನ್ನು ಸಿಂಧನೂರಿನ ಜಗನ್ನಾತಾ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉಪನ್ಯಾಸಕರಾದ ಶ್ರೀ ಕಿಶನರಾವ್, ಹಿರಿಯ ಅರೋಗ್ಯ ನಿರೀಕ್ಷಕರು, ನಗರಸಭೆ ಸಿಂಧನೂರು ಇವರು ತ್ಯಾಜ್ಯ (ಕಸದ) ವಿಲೇವಾರಿ & ಅದರ ನಿರ್ವಹಣೆ , ವಿಷಯದ ಕುರಿತು ಸಿ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿಕೊಟ್ಟರು. ಹಸಿ ಕಸ, ಒಣ ಕಸದ ವಿಂಗಡಣೆ, ಸ್ವಚ್ಛತೆಯ ಪ್ರಾಮುಖ್ಯತೆ, ತ್ಯಾಜ್ಯದ ವಿಲೇವಾರಿಯ ವಿಧಾನ, ಸಿಂಧನೂರಿನಲ್ಲಿ ಪ್ರತಿದಿನ 36 ಟನ್ ತ್ಯಾಜ್ಯ ಸಂಗ್ರಹವಾಗುತ್ತದೆ, ಹೀಗೆ ಹಲವಾರು ಅಮೂಲ್ಯ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಮಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ವಿಜಯಕುಮಾರ ಖಿಖ ಅಧ್ಯಕ್ಷರು ಜಗನ್ನಾತಾ ಶಾಲೆ ಸಿಂಧನೂರು ಇವರು ಕಸ ವಿಂಗಡಣೆ ಮಾಡುವುದರ ಕುರಿತು ಮಾತನಾಡಿದರು.. ಕಾರ್ಯಕ್ರಮದ ಅತಿಥಿಗಳಾಗಿ ಶ್ರೀ ಬಶೀರ್ ಎತ್ಮಾರಿ, ನಿಕಟಪೂರ್ವ ಅಧ್ಯಕ್ಷರು ರೋಟರಿ ಕ್ಲಬ್ ಸಿಂಧನೂರು, ಶ್ರೀ ಬಸವರಾಜ ಮು.ಗು. ಶ್ರೀ ಜಗನ್ನಾತ ಶಾಲೆ ಸಿಂಧನೂರು, ಶ್ರೀ ಮೋಸಿನ ಖಾನ್ ಮು. ಗು. ಆರ್ಯನ್ ಆಂಗ್ಲ ಮಾಧ್ಯಮ ಶಾಲೆ ಸಿಂಧನೂರು ಇವರು ಉಪಸ್ಥಿತರಿದ್ದರು... ಜೈ ರಾಮಕೃಷ್ಣ..

## ಸಿಎಂ ಸಿದ್ದರಾಮಯ್ಯ ಅವರ ಸ್ಥಾನ ಅಬಾಧಿತ :ಡಾ.ಜಿ.ಪರಮೇಶ್ವರ್

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಸಚಿವ ಸಂಪುಟ ಪುನರ್‌ರಚನೆ ಯಾದರೆ ನಾಯಕತ್ವ ಬದಲಾವಣೆಯಾಗುವುದಿಲ್ಲ. ಸಿಎಂ ಸಿದ್ದರಾಮಯ್ಯ ಅವರ ಸ್ಥಾನ ಅಬಾಧಿತ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಸಿಎಂ ಸಿದ್ದರಾಮಯ್ಯ ದೆಹಲಿಗೆ ಹೋಗುವ ಮುನ್ನ, ನಾನು ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೆ. ಅನಂತರದ ವಿದ್ಯಮಾನಗಳ ಬಗ್ಗೆ ಮಾಹಿತಿ ಇಲ್ಲ. ಆದರೆ ಸಚಿವ ಸಂಪುಟ ಪುನರ್‌ರಚನೆಗೆ ಅನುಮತಿಸಲಾಗಿದೆ ಎಂಬ ವರದಿಯನ್ನು ನೋಡಿದ್ದೇನೆ ಎಂದರು.



ಬಹಳಷ್ಟು ಮಂದಿ ಶಾಸಕರಿಗೆ ಸಚಿವರಾಗಬೇಕು ಎಂದು ಬಹಳಷ್ಟು ದಿನಗಳಿಂದಲೂ ಬೇಡಿಕೆ ಇದೆ. ಅವರಿಗೆ ಅವಕಾಶ ಸಿಗಬೇಕು. ಸಂಪುಟ ಪುನರ್‌ರಚನೆ ಮುಖ್ಯಮಂತ್ರಿ ಅವರ ಪರಮಾಧಿಕಾರ. ಹೈಕಮಾಂಡ್ ಜೊತೆ ಚರ್ಚೆ ಮಾಡಿ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ವಿವರ ಗೊತ್ತಿಲ್ಲ. ಸಮಯ ಸಂದರ್ಭ ನೋಡಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದರು. ಸಂಪುಟ ಪುನರ್‌ರಚನೆ ಹಿನ್ನೆಲೆಯಲ್ಲಿ ತಾವು ದೆಹಲಿಗೆ ಹೋಗಿಲ್ಲ, ಹೋಗುವುದೂ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. 2024–25, 2025–26ನೇ ಸಾಲಿಗೆ ಪ್ರತಿ ಟನ್‌ಗೆ 3,300 ರೂ.ಗಳನ್ನು ನಿಗದಿ ಮಾಡಿದೆ. ನಮ ರೈತರು ಇನ್ನಷ್ಟು ಹೆಚ್ಚು ಕೇಳುತ್ತಿದ್ದಾರೆ. ಹೆಚ್ಚುವರಿ ದರವನ್ನು ಕಾರ್ಖಾನೆಗಳು ಕೊಡಬೇಕು, ಸರ್ಕಾರಗಳು ನೀಡಬೇಕಿದೆ. ರಾಜ್ಯ ಸರ್ಕಾರ ರೈತರ ಹಿತದೃಷ್ಟಿಯಿಂದ ಪ್ರತಿ ಟನ್‌ಗೆ 50 ರೂ. ಹೆಚ್ಚುವರಿ ಹಣ ನೀಡಲು ಮತ್ತು ಕಾರ್ಖಾನೆಗಳಿಂದ 50 ರೂ. ಕೊಡಿಸಲು ದರ ನಿಗದಿಪಡಿಸಲಾಗಿದೆ. ಕಬ್ಬಿನ ಉಪ ಉತ್ಪನ್ನಗಳ ಆಧಾರದ ಮೇಲೆ ದರ ಕೊಡುವಂತೆ ರೈತರು ಬೇಡಿಕೆ ಮಂಡಿಸಿದ್ದರು. ಈ ಎಲ್ಲಾ ವಿಚಾರಗಳ ಚರ್ಚೆ ಮಾಡಲು ಮುಖ್ಯಮಂತ್ರಿ ಅವರು ಪ್ರಧಾನಮಂತ್ರಿಯವರ ಸಮಯ ಕೇಳಿದ್ದರು. ಈಗ ಸಮಯ ಸಿಕ್ಕಿದೆ, ನಾಳೆ ಭೇಟಿಯಾಗುತ್ತಾರೆ ಎಂದು ಹೇಳಿದರು. ಪ್ರಧಾನಿ ಭೇಟಿಯ ವೇಳೆ ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಅನುಮತಿಸಿರುವುದು ಮತ್ತಿತರ ವಿಚಾರಗಳ ಕುರಿತು ಚರ್ಚೆ ನಡೆಸುವ ಸಾಧ್ಯತೆ ಇದೆ ಎಂದರು.

# ಚಿನ್ನದ ನಾಡಿನಲ್ಲಿ ಆಹಾರ ಮೇಳ

❑ ನೈಜ್ಯ ದೆಸೆ ನ್ಯೂಸ್

ಲಿಂಗಸೂರು: ತಾಲೂಕಿನ ಹಟ್ಟಿ ಚಿನ್ನದ ಗಣಿಯ ಸರ್ಕಾರಿ ಪದವಿ ಪೂರ್ವ ಕಾಲೇಜ್ ವಿದ್ಯಾರ್ಥಿಗಳ ಆಹಾರ ಮೇಳ.ವಿದ್ಯಾರ್ಥಿಗಳು ವಿವಿಧತರ ತಿಂಡಿ ತಿನಿಸು ಭರ್ಜರಿ ವ್ಯಾಪಾರ ನಡೆಸಿ ಕಿಸೆ ತುಂಬಿಸಿಕೊಂಡು ಖುಷಿ ಆದ ವಿದ್ಯಾರ್ಥಿಗಳು. ಮನೆಯಲ್ಲಿ ತಯಾರಿಸಿದ ಉಪಹಾರಗಳು ಮಾರಾಟಕ್ಕೆ ಕಾಲೇಜ್ ಆವರಣದಲ್ಲಿ ವೇದಿಕೆ ಒದಗಿಸಿದ್ದು ಆಹಾರ ಮೇಳ. ಹಟ್ಟಿ ಚಿನ್ನದ ಗಣಿ. ಸ್ಥಳೀಯ ಸರ್ಕಾರಿ ಪದವಿ ಪೂರ್ವ ಕಾಲೇಜ ನಲ್ಲಿ ನಡೆದ ಆಹಾರ ಮೇಳದಲ್ಲಿ ವಿದ್ಯಾರ್ಥಿಗಳು ಮನೆಯಲ್ಲಿಯೇ ನಾನತರಹದ ತಿಂಡಿಗಳು ತಯಾರಿಸಿ ಮಾರಾಟ ಮಾಡಿ ಸಂತಸ ಪಟ್ಟರು.



ವಿದ್ಯಾರ್ಥಿಗಳು ಸಮೋಸಾ, ಬಜ್ಜಿ, ಚಿಕನ್ ಬಿರಿಯಾನಿ, ಎಗ್ ರೈಸ್, ಚುರುಮುರಿ, ಅವಲಕ್ಕಿ ಒಗ್ಗರಣೆ, ಚಕ್ಕುಲಿ, ರವೆ ಉಂಡಿ ಸೇರಿದಂತೆ ಬಾಯಲ್ಲಿ ನೀರೂರಿಸುವ ತಿಂಡಿಗಳು ತಾವೇ ಮನೆಯಲ್ಲಿ ತಯಾರಿಸಿದರು. ಬಗೆಬಗೆಯ ತಿನಿಸುಗಳನ್ನು ಪಕ್ಕಾ ವೃತ್ತಿಪರ ವರ್ತಕರಂತೆ ಮಾರಾಟ ಮಾಡಿ ಲಾಭಗಳಿಸಿ ಸಂಭ್ರಮಿಸಿದರು. ವ್ಯವಹಾರ ಜ್ಞಾನ: ವಿದ್ಯಾರ್ಥಿಗಳಲ್ಲಿ ವ್ಯಾಪಾರ ವಹಿವಾಟ, ಲಾಭ ಕುರಿತು ಅರಿವು ಮೂಡಿಸಲು ಹಟ್ಟಿ ಸರ್ಕಾರಿ ಪದವಿ ಪೂರ್ವ ಕಾಲೇಜು ಶಿಕ್ಷಣದ ಮಂಡಳಿಯು ಇಂಥ–'ದೊಂದು ವಿಶಿಷ್ಟ ಕಾರ್ಯಕ್ರಮ ರೂಪಿಸಿತ್ತು. ನಂತರ ವಿದ್ಯಾರ್ಥಿಗಳು ತಾವು ತಯಾರಿಸಿದ ಉಪಹಾರಗಳ ಖರ್ಚು ವೆಚ್ಚ ಎಸ್ಟು ಲಾಭ ಆಗಿದೆ ಎಂಬುವು ಶಿಕ್ಷಕರಿಗೆ ಮಾಹಿತಿ ನೀಡಿದ್ದರು. ಈ ಸಂಧರ್ಭದಲ್ಲಿ ಕಾಲೇಜಿನ ಪ್ರಾಚರ್ಯರಾದ ಶ್ರೀ ಶಾಮರಾಜ್ ಉ , ಹಿರಿಯ ಉಪನ್ಯಾಸಕರಾದ ಶ್ರೀಮತಿ ಕಮಲಾ ಭಾಯಿ, ಉಪನ್ಯಾಸಕರಾದ ಸದ್ದಾಂ ಪಾಶ ಎ, ಹನುಮಂತ ನಾಯಕ, ರಾಜಕುಮಾರ, ಶ್ರೀಮತಿ ಸುಮಿತ್ರಾ ರೆಡ್ಡಿ, ಇಮಾಮ ಸಾಬ್, ಸಿದ್ದಲಿಂಗಮ್ಮ, ಶಹನವಾಜ, ಪರಮೇಶ್, ಅರ್ಪಣಾ ಹಾಗು ಪರಿಚಾರಕರಾದ ಬಸಯ್ಯ ಹಾಜರಿದ್ದರು..

# ಶ್ರದ್ದೆಯಿಂದ ಓದಿದರೆ ಯಶಸ್ಸು ಸಾಧ್ಯ :ರಾಮಣ್ಣ ನಾಯಕ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ವಿದ್ಯಾರ್ಥಿಗಳು ನಿಶ್ಚಿತ ಗುರಿ ಜೊತೆ ಶ್ರದ್ದೆಯಿಂದ ಓದಿದರೆ ಯಶಸ್ಸು ಕಾಣಲು ಸಾಧ್ಯ ಎಂದು ಸಂಸ್ಥೆಯ ಕಾರ್ಯದರ್ಶಿ ರಾಮಣ್ಣ ನಾಯಕ ಹೇಳಿದರು.

ಮಸ್ಕಿ ತಾಲೂಕಿನ ಮುದ್ದಾಪುರನ ತುಂಗಭದ್ರಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಪ್ರತಿಯೊಬ್ಬರಿಗೂ ಶಿಕ್ಷಣ ಮುಖ್ಯ ಅದನ್ನು ಸಂಪಾದಿಸುವ ದೃಢಸಂಕಲ್ಪ ಮಾಡಬೇಕು.

ವಿದ್ಯಾರ್ಥಿಗಳು ತಾಳ್ಮೆ ಮತ್ತು ಸಂಯಮದಿಂದ ನಡೆದುಕೊಳ್ಳುವ ಮೂಲಕ



ಜೀವನದಲ್ಲಿ ಯಶಸ್ಸು ಕಾಣಬೇಕು ಎಂದರು. ಕಾಲೇಜಿನ ಪ್ರಾಚಾರ್ಯ ಲಕ್ಷ್ಮಣ ಕರ್ಲಿ ಮಾತನಾಡಿ ಪಿಯುಸಿ ಹಂತ ಜೀವನದ ಬದಲಾವಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಆದ್ದರಿಂದ ವಿದ್ಯಾರ್ಥಿಗಳಲ್ಲಿ ಓದುವ ಛಲ ಮೂಡಬೇಕು ಎಂದರು. ಕಾಲೇಜಿನ ವಿದ್ಯಾರ್ಥಿಗಳಾದ ತಸ್ಲೀಮ್, ಹುಲಿಗೆಮ್ಮ, ಅನುಪಮಾ ಹಾಗೂ ನಿಂಗಮ್ಮ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅನಿಸಿಕೆ ವ್ಯಕ್ತಪಡಿಸಿದರು. ಉಪನ್ಯಾಸಕರಾದ ಸೋಮನಾಥ, ವಿಜಯಲಕ್ಷ್ಮಿ, ಶ್ರೀಕಾಂತ, ಬಸಲಿಂಗಪ್ಪ ಹಾಗೂ ವಿದ್ಯಾರ್ಥಿಗಳು ಇದ್ದರು. ದೀಪಾ ಮತ್ತು ಸಂಗಡಿಗರ ಪ್ರಾರ್ಥ–'ನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಉಪನ್ಯಾಸಕರಾದ ಹುಸೇನಬಾಷಾ ನಿರೂಪಿಸಿದರು, ಶಂಕ್ರಪ್ಪ ಸ್ವಾಗತಿಸಿದರೆ, ಅಕ್ಕಮಹಾದೇವಿ ವಂದಿಸಿದರು.

# ಉಡಮಗಲ್ ಖಾನಾಪುರದಲ್ಲಿ ಮಕ್ಕಳ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ನವೆಂಬರ್ 16 (ಕರ್ನಾಟಕ ವಾರ್ತೆ): ರಾಯಚೂರು ತಾಲೂಕಿನ ಸರ್ಕಾರಿ ಪ್ರೌಢಶಾಲೆ ಉಡ–'ಮಗಲ್ ಖಾನಾಪುರದಲ್ಲಿ ನವೆಂಬರ್ 14ರಂದು ಮಕ್ಕಳ ದಿನಾಚರಣೆ ಕಾರ್ಯಕ್ರಮವು ಅದ್ದೂರಿಯಾಗಿ ನಡೆಯಿತು. ಪಂಡಿತ್ ಜವಾಹರಲಾಲ ನೆಹರು ಅವರ ಭಾವಚಿತ್ರಕ್ಕೆ ಶಾಲಾ ಮಂತ್ರಿಮಂಡಲದ ಸದಸ್ಯರು, ಎಸ್.ಡಿ. ಎಮ್.ಸಿ. ಸದಸ್ಯರು ಮಾಲಾರ್ಪಣೆ ಮಾಡಿದರು.

ವಿದ್ಯಾರ್ಥಿಗಳು ಪುಷ್ಪನಮನ ಸಲ್ಲಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಮತ್ತು ಅಧಿಕಾರಿಗಳು ಇದೆ ವೇಳೆ ಬಹುಮಾನ



ನೀಡಿದರು. ಕಾರ್ಯಕ್ರಮದಲ್ಲಿ ಮೊದಲಿಗೆ ಸಂವಿಧಾನ ಪೀಠಿಕೆಯನ್ನು ಸಾಮೂಹಿಕವಾಗಿ ಹೇಳಿಸಲಾಯಿತು.

ಡಯಟ್ ಕಾಲೇಜಿನ ಉಪನ್ಯಾಸಕರಾದ ರಾಜೇಂದ್ರ ಶಾ ಸಸಿಗೆ ನೀರು ಹಾಕಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಲ್ಲಿನ ಮುಖ್ಯ ಗುರುಗಳು ಮತ್ತು ಶಿಕ್ಷಕ ವೃಂದದವರು ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಶಾಲಾ ಮುಖ್ಯ ಗುರು ವೀರೇಶ್ ಅಂಗಡಿ ಪ್ರಾಸ್ತಾವಿಕ ಮಾತನಾಡಿ, ಸರ್ಕಾರದಿಂದ ಮತ್ತು ಶಿಕ್ಷಣ ಇಲಾಖೆಯಿಂದ ಮಕ್ಕಳಿಗೆ ದೊರೆಯುವ ಶೈಕ್ಷಣಿಕ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಹಾಗೂ ಎಸ್‌ಎಸ್‌ಎಲ್‌ಸಿ ‌ವಿದ್ಯಾರ್ಥಿಗಳ ಫಲಿತಾಂಶಕ್ಕಾಗಿ ಕೈಗೊಂಡ ಶೈಕ್ಷಣಿಕ ಕಾರ್ಯ ಚಟುವಟಿಕೆ ಕುರಿತು ಮಾತನಾಡಿದರು. ಶಾಲೆಯ ಕನ್ನಡ ಕಲಾ ಶಿಕ್ಷಕರಾದ ಡಾ. ದಂಡಪ್ಪ ಬಿರಾದಾರ ಮಾತನಾಡಿದರು. ಬಳಿಕ ಮಕ್ಕಳಿಂದ ಆಕರ್ಷಕವಾದ ಹಾಡುಗಳ ನೃತ್ಯ ಕಾರ್ಯಕ್ರಮ ಜರುಗಿದವು. ಎಸ್‌ಡಿಎಂಸಿ ಸದಸ್ಯರಾದ ದಸ್ತಗಿರಿ ಗೋವಿಂದು ತಿಮ್ಮಪ್ಪ, ರವಿಕುಮಾರ್, ಸುನಿತಾ, ಶಾಲಾ ಶಿಕ್ಷಕರಾದ ನಪಿಜ್ ಅಂಜುಮ, ವೀಣಾ ಕುಲಕರ್ಣಿ, ಸಾವಿತ್ರಿ, ಸರಸ್ವತಿ, ಶಿವಲೀಲಾ, ವಿವಿಧ ಗ್ರಾಮಗಳ ವಿದ್ಯಾರ್ಥಿಗಳ ಪಾಲಕರು–ಪೋಷಕರು ಹಾಗೂ ಶಾಲಾ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಿಕ್ಷಕಿ ಸರಸ್ವತಿ ನಿರೂಪಿಸಿದರು. ನೀಲಕಂಠ ನಿರ್ವಹಿಸಿದರು. ಸೂಗಮ ಮತ್ತು ಭಾವನಾ ಪ್ರಾರ್ಥಿಸಿದರು.

# ಉದ್ಯೋಗ ಪ್ರಕಟಣೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲು ಪ್ರಾಧಿಕಾರದಿಂದ ದಿನಾಂಕ 15.11.2025 ರಂದು ಅಧಿಸೂಚನೆ ಹೊರಡಿಸಲಾಗಿದೆ. ಕರ್ನಾಟಕದ ವಿವಿಧ ಸರ್ಕಾರಿ ಇಲಾಖೆ/ಸಂಸ್ಥೆ/ನಿಗಮದಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ 08.10.2025 ಮತ್ತು 31.10.2025 ರಂದು ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳಿಗೆ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು ಮತ್ತು ದಿನಾಂಕ 31.10.2025 ರಂದು ಪ್ರತ್ಯೇಕ ಪ್ರಕಟಣೆ ಹೊರಡಿಸಿ ಅರ್ಜಿ ಸಲ್ಲಿಸಲು ದಿನಾಂಕವನ್ನು 14.11.2025ರ ವರೆಗೆ ಹಾಗೂ ದಿನಾಂಕ 15.11.2025 ರವರೆಗೆ ಶುಲ್ಕ ಪಾವತಿಸುಲು ಅವಕಾಶ ನೀಡಲಾಗಿತ್ತು. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿರುವುದರಿಂದ, ಈಗಾಗಲೇ ಅಧಿಸೂಚನೆ ಹೊರಡಿಸಿದ ಇಲಾಖೆ/ಸಂಸ್ಥೆಗಳ ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಈ ಕೆಳಗಿನಂತೆ ನಿಗದಿಗೊಳಿಸಲಾಗಿದೆ.

1) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: 25.11.2025

2) ಆನ್‌ಲೈನ್ ಮೂಲಕ ಶುಲ್ಕ ಪಾವತಿಸಲು ಕೊನೆಯ ದಿನಾಂಕ : 26.11.2025



**ನೈಜ್ಯ ದೆಸೆ ನ್ಯೂಸ್**

ರಾಯಚೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿದ್ದ 'ಅಗ್ರಿಕಲ್ಚರ್ ಪ್ರೀಮಿಯರ್ ಲೀಗ್ ' ಕ್ರೀಡಾ ಕೂಟವನ್ನು ಇಂದು ಉದ್ಘಾಟಿಸಿ, ಆಟಗಾರರ ಕ್ರೀಡೋತ್ಸಾಹವನ್ನು ಪ್ರೋತ್ಸಾಹಿಸಿದ ರಾಜ್ಯ ಕಾಂಗ್ರೆಸ್ ಯುವ ಮುಖಂಡರಾದ ಶ್ರೀ ರವಿ ಬೋಸರಾಜು ಅವರು.

## ಎರಡೂವರೆ ವರ್ಷದಲ್ಲಿ 5800 ಬಸುಗಳ ಖರೀದಿ :ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

**ನೈಜ್ಯ ದೆಸೆ ನ್ಯೂಸ್**

**ಮಧುಗಿರಿ: ರಾಜ್ಯದ ಜನತೆಗೆ ಸಾರಿಗೆ ವ್ಯವಸ್ಥೆಗೆ ಅನುಕೂಲವಾಗುವ ಉದ್ದೇಶದಿಂದ ಕಳೆದ ಎರಡೂವರೆ ವರ್ಷದಲ್ಲಿ ಸರ್ಕಾರದ ವತಿಯಿಂದ 5800 ಬಸ್ ಗಳನ್ನು ಖರೀದಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.**



ಪಟ್ಟಣದ ಹಿಂದೂಪುರ ರಸ್ತೆಯಲ್ಲಿರುವ ಪಾಳ್ಯದಹಳ್ಳಿ ಸಮೀಪ ಸಾರಿಗೆ ಇಲಾಖೆ ಮತ್ತು ರೇಷ್ಮೆ ಇಲಾಖೆಯ ಸಹಯೋಗದೊಂದಿಗೆ ಶನಿವಾರ ಹಮಿಕೊಂಡಿದ್ದ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ನೂತನ ಕಟ್ಟಡ ಹಾಗೂ ಸ್ವಯಂ ಚಾಲಿತ ವಾಹನ ಚಾಲನ ಪರೀಕ್ಷಾ ಪಥ ಹಾಗೂ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯ ಕಟ್ಟಡದ ಶಂಕುಸ್ಥಾಪನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ' 2016ರ ನಂತರ ಇದೇ ಮೊದಲ ಬಾರಿಗೆ 2023ರಲ್ಲಿ 9 ಸಾವಿರ ಜನರಿಗೆ ಇಲಾಖೆಯಲ್ಲಿ ಕೆಲಸ ನೀಡಲಾಗಿದ್ದು, 1000 ಜನರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಲಾಗಿದೆ. ಇನ್ನೂ ಒಂದು ಸಾವಿರ ಬಾಕಿ ಇದ್ದು, ಸಿಎಂ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದು. 70 ಪಲ್ಲಕ್ಕಿ ಬಸ್ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಶೀಘ್ರದಲ್ಲೇ ಚಾಲನೆ ನೀಡಲಾಗುವುದು' ಎಂದು ಹೇಳಿದರು. 'ರಾಜ್ಯಾದ್ಯಂತ ಒಟ್ಟು 45 ಟ್ರ್ಯಾಕ್ ಗಳನ್ನು ನಿರ್ಮಿಸುತ್ತಿದ್ದು, ಈಗಾಗಲೇ 7 ಟ್ರ್ಯಾಕ್ ಗಳು ಚಾಲನೆಯಲ್ಲಿವೆ. 28 ಟ್ರ್ಯಾಕ್‌ಗಳು ಬಾಕಿ ಇವೆ. ಈ ವರ್ಷ 10 ಟ್ರ್ಯಾಕ್‌ಗಳು ಟೆಂಡರ್ ಆಗಿದ್ದು, ಅದರಲ್ಲಿ ಮಧುಗಿರಿಯೂ ಒಂದು. ಶಾಸಕ ಕೆ.ಎನ್. ರಾಜಣ್ಣನವರು ಕ್ಷೇತ್ರದ ಜನತೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇಚ್ಛಾಶಕ್ತಿ ವಹಿಸಿ ರೇಷ್ಮೆ ಇಲಾಖೆಯ ಸ್ಥಳ ಬಿಡಿಸಿ ಕೊಟ್ಟ ಹಿನ್ನೆಲೆಯಲ್ಲಿ ಮಧುಗಿರಿಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಕಾಮಗಾರಿ ಪ್ರಾರಂಭಿಸಲಾಗಿದೆ. ಇದರಿಂದ ಅಕ್ಕಪಕ್ಕದ ತಾಲ್ಲೂಕಿಗೆ ಅನುಕೂಲವಾಗಲಿದೆ. ದೇಶದ ಯಾವುದೇ ರಾಜ್ಯದಲ್ಲೂ ಇಷ್ಟು ಟ್ರ್ಯಾಕ್ ಗಳು ಇಲ್ಲ. ಪ್ರದಾನಿ ನರೇಂದ್ರ ಮೋದಿಯವರ ತವರು ಕ್ಷೇತ್ರ ಗುಜರಾತ್‌ನಲ್ಲೂ ಇಷ್ಟು ಟ್ರ್ಯಾಕ್ ಗಳು ಇಲ್ಲ' ಎಂದರು. ಮಾಜಿ ಸಚಿವ ಶಾಸಕ ಕೆ.ಎನ್.ರಾಜಣ್ಣ ಮಾತನಾಡಿ, 'ಮುಂದಿನ ದಿನಗಳಲ್ಲಿ ಮಧುಗಿರಿ ಜಿಲ್ಲಾ ಕೇಂದ್ರ ಮಾಡಬೇಕು ಎಂಬುದು ನಮ ಗುರಿ. ಈಗಾಗಲೇ ಜಿಲ್ಲಾಧಿಕಾರಿಗಳ ಕಚೇರಿ, ಎಸ್‌ಪಿ ಕಚೇರಿ ಹೊರತುಪಡಿಸಿ ಎಲ್ಲಾ ಕಚೇರಿಗಳನ್ನು ಕ್ಷೇತ್ರದಲ್ಲಿ ಪ್ರಾರಂಭಿಸಲಾಗಿದೆ. ಕೇಬಲ್ ಕಾರ್ ಬಗ್ಗೆ ಸಲಹೆ ಪಡೆದು ಆದಷ್ಟು ಬೇಗ ಕಾಮಗಾರಿ ಕೈಗೊತ್ತಿಕೊಳ್ಳಲಾಗುವುದು' ಎಂದು ತಿಳಿಸಿದರು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನವೀಕರಣಗೊಳಿಸಬೇಕು. ಎಂದು ಸಚಿವರಲ್ಲಿ ಮನವಿ ಮಾಡಿದರು. ಪುರಸಭೆ ಮಾಜಿ ಅಧ್ಯಕ್ಷ ಲಾಲಾಪೇಟೆ ಮಂಜುನಾಥ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಎ.ವಿ.ಪ್ರಸಾದ್, ತಾ.ಪಂ. ಇಒ ಲಕ್ಷ್ಮಣ್, ಅಪಾರ ಸಾರಿಗೆ ಆಯುಕ್ತೆ ಓಂಕಾರೇಶ್ವರಿ, ಜಂಟಿ ಸಾರಿಗೆ ಆಯುಕ್ತೆ ಗಾಯತ್ರಿದೇವಿ, ರೇಷ್ಮೆ ಇಲಾಖೆ ಅಪಾರ ನಿರ್ದೇಶಕ ವೈ.ಟಿ. ತಿಮಯ್ಯ, ಉಪ ನಿರ್ದೇಶಕ ಲಕ್ಷೀನರಸಯ್ಯ, ಸಹಾಯಕ ನಿರ್ದೇಶಕ ಮೋಹನ್, ವಿಸ್ತರಣಾಧಿಕಾರಿಗಳಾದ ನಾರಾಯಣ, ವೀರಣ್ಣ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿ.ಜೆ . ರಾಜಣ್ಣ, ನಿರ್ದೇಶಕ ಬಿ ನಾಗೇಶ್‌ಬಾಬು, ವಕೀಲರ ಸಂಘದ ಅಧ್ಯಕ್ಷ ಪಿ.ಸಿ.ಕೃಷ್ಣಾರೆಡ್ಡಿ ಮುಂತಾದವರು ಹಾಜರಿದ್ದರು.

# ನೋಬೆಲ್ ಪದವಿ ಮಹಾವಿದ್ಯಾಲಯದ ಇತಿಹಾಸ ಸಾಮ್ರಾಜ್ಯ ದರ್ಶನ ವಸ್ತು ಪ್ರದರ್ಶನ

**ನೈಜ್ಯ ದೆಸೆ ನ್ಯೂಸ್**













ಸಿಂಧನೂರಿನ ನೊಬೆಲ್ ಪದವಿ ಮಹಾವಿದ್ಯಾಲಯದಲ್ಲಿ ಇತಿಹಾಸ ಸಾಮ್ರಾಜ್ಯ ದರ್ಶನ ಎಂಬ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಅತ್ಯಂತ ಯಶಸ್ವಿಯನ್ನು ಕಂಡು ಐತಿಹಾಸಿಕ ಕ್ಷಣಗಳನ್ನು ಸೃಷ್ಟಿ ಮಾಡುವಲ್ಲಿ ಕಾಲೇಜು ವಿದ್ಯಾರ್ಥಿಗಳು ಅತ್ಯಂತ ಪರಿಶ್ರಮ ಉತ್ತಮ ಆಸಕ್ತಿ ಹಾಗೂ ತನು ಮನದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾಲೇಜಿಗೆ ಮತ್ತೊಂದು ದಾಖಲೆಯ ಗರಿಯನ್ನು ನೀಡಿದ್ದಾರೆ.

ಇತಿಹಾಸ ಸಾಮ್ರಾಜ್ಯ ದರ್ಶನ ಕಾರ್ಯಕ್ರಮದಲ್ಲಿ ಕಾಲೇಜಿನ ವ ಇತಿಹಾಸ ಉಪನ್ಯಾಸಕರಾದ ಶ್ರೀ ಪಂಚಾಕ್ಷರಯ್ಯ ಸ್ವಾಮಿ ಮತ್ತು ಮೌಲಾಸಾಬ್ ಇತಿಹಾಸ ಉಪನ್ಯಾಸಕರ ನೇತೃತ್ವದಲ್ಲಿ ಪದವಿ ಕಾಲೇಜು ವಿದ್ಯಾರ್ಥಿಗಳನ್ನು ಒಟ್ಟು ಏಳು ತಂಡಗಳನ್ನು ರಚನೆ ಮಾಡಿ ಪ್ರತಿ ತಂಡಗಳಿಗೂ ಇತಿಹಾಸದ ಒಂದೊಂದು ವಿಷಯದ ಅಡಿಯಲ್ಲಿ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಒಂದನೇ ತಂಡ ನಟರಾಜ ತಂಡದವರು ನಾಯಕ :ನಿಸರ್ಗ ಉಸ್ತುವಾರಿ ಉಪನ್ಯಾಸಕರು: ಶ್ರೀ ಸುರೇಶ್ ಮುಳ್ಳೂರ್ ಶ್ರೀ ಹೊನ್ನಪ್ಪ ಬೆಳಗುರ್ಕಿ ಭಾರತೀಯ ಶಾಸ್ತ್ರೀಯ ನೃತ್ಯಗಳು ಕುರಿತು ದೇವಾಲಯದಲ್ಲಿರುವ ಕೆಲವು ಶಿಲ್ಪಗಳಿಗೆ ಜೀವ ತುಂಬಿ ನಾಟ್ಯ ನೃತ್ಯದ ಮೂಲಕ ಜನಮನ ಸೆಳೆದರು.

ಎರಡನೇ ತಂಡದ ನಾಯಕ ಉಸ್ತುವಾರಿ ಉಪನ್ಯಾಸಕರು: ಮರಿಸ್ವಾಮಿ ಇಂಗ್ಲೀಷ್ ಉಪನ್ಯಾಸಕರು ಅವರು ವಿಜಯನಗರ ಸಾಮ್ರಾಜ್ಯದ ಕುರಿತು ಸಾಮ್ರಾಜ್ಯದ ಅರಸರು ಆಡಳಿತ ರಾಜರ ಪ್ರಜೆಗಳ ಆಡಳಿತದ ವೈಖರಿ ಹಾಗೂ ದೇವಾಲಯಗಳ ಕೆತ್ತನೆಗಳನ್ನು ಸವಿವರವಾಗಿ ಪ್ರದರ್ಶಿಸಿದರು ಮೂರನೇ ತಂಡ ನಾಯಕ : ಉಸ್ತುವಾರಿ ಉಪನ್ಯಾಸಕರು: ಕುಮಾರಿ ಅಶ್ವಿನಿ ಶ್ರೀಮತಿ ನಂದಿನಿ ಉಪನ್ಯಾಸಕರು ಗಂಗರ ತಲಕಾಡು ವಿಷಯದಡಿಯಲ್ಲಿ ಶಿವನ ಮೂರ್ತಿಯನ್ನು ಉದ್ಭವಿಸಿ ಪ್ರಮುಖ ಗಂಗರ ದೇವಾಲಯಗಳನ್ನು ನಿರ್ಮಿಸಿ ಅಲ್ಲಿನ ವಾಸ್ತುಶಿಲ್ಪವನ್ನು ಸ್ಮರಿಸುವ ಪ್ರದರ್ಶನ ನೀಡಿದರು.

ನಾಲ್ಕನೇ ತಂಡ ನಾಯಕ: ಉಸ್ತುವಾರಿ ಉಪನ್ಯಾಸಕರು: ಕುಮಾರಿ ಜ್ಯೋತಿ ಮೇಡಂ ಗೌತಮ ಬುದ್ಧನ ಜೀವನ ಬೋಧನೆಗಳು ಬುದ್ಧನ ಕಾಲದ ಸಮಾಜದ ಪರಿಸ್ಥಿತಿಯನ್ನು ನೈಸರ್ಗಿಕ ಸ್ಥಿತಿಯನ್ನು ವರ್ಣಿಸಿ ಚಿತ್ರಿಸಿ ಪ್ರದರ್ಶನ ನೀಡಿದರು 5ನೇ ತಾಂಡ ನಾಯಕ ಉಸ್ತುವಾರಿ ಉಪನ್ಯಾಸಕರು: ಕುಮಾರ್ ಪಂಪಾಪತಿ ರಾಜ್ಯಶಾಸ್ತ್ರ ಉಪನ್ಯಾಸಕರು ಮುಘಲ್ ಸಾಮ್ರಾಜ್ಯ ಕುರಿತು ಅವರ ಕಲೆ ಮತ್ತು ವಾಸ್ತುಶಿಲ್ಪದ ಸಮಗ್ರ ಚಿತ್ರಣ ಮತ್ತು ಮೊಘಲ್ ರಾಜರುಗಳ ಆಳ್ವಿಕೆಯ ಮಾಹಿತಿಯನ್ನು ಚಿತ್ರಿಸಿ ವರ್ಣಿಸಿದರು ಆರನೇ ತಂಡ ನಾಯಕ ಭಾಗ್ಯಶ್ರೀ ಉಸ್ತುವಾರಿ ಉಪನ್ಯಾಸಕರು: ಶ್ರೀ ವೆಂಕೋಬ ವಾಣಿಜ್ಯ ಉಪನ್ಯಾಸಕರು ಗುಪ್ತ ಸಾಮ್ರಾಜ್ಯದ ಸುವರ್ಣ ಯುಗದ ಕುರಿತು ಸಮುದ್ರಗುಪ್ತನ ವೇಷ ತೊಟ್ಟು ಗುಪ್ತರ ಪ್ರಮುಖ ದೇವಾಲಯಗಳು ವಾಸ್ತುಶಿಲ್ಪವನ್ನು ಮರುಕಳಿಸುವ ರೀತಿಯಲ್ಲಿ ವಸ್ತು ಪ್ರದರ್ಶನ ಮಾಡಿದರು.

7ನೇ ತಂಡ ನಾಯಕ ನವೀನ್ ಕುಮಾರ್ ಉಸ್ತುವಾರಿ ಉಪನ್ಯಾಸಕರು: ಕುಮಾರಿ ಜ್ಯೋತಿ ಕನ್ನಡ ಉಪನ್ಯಾಸಕರು ಬಾದಾಮಿ ಚಾಲುಕ್ಯರ ಅರಸರ ಆಡಳಿತದ ಜಾಣ್ಮೆ , ಗುಹೆ ಮತ್ತು ದುರ್ಗಾ ದೇವಾಲಯ, ಆಹಾರ ಪದ್ಧತಿಯ ಕುರಿತು ಸಮಗ್ರ ಚಿತ್ರಣವನ್ನು ಪ್ರದರ್ಶನ ಮಾಡಿದರು. ಈ ಮೇಲಿನ ಏಳು ತಂಡಗಳ ಉಸ್ತುವಾರಿಯನ್ನು ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಶ್ರೀ ಪಂಚಾಕ್ಷರಯ್ಯ ಸ್ವಾಮಿ ಮತ್ತು ಮೌಲ್ ಸಾಬ್ ಇತಿಹಾಸ ಉಪನ್ಯಾಸಕರು ವಹಿಸಿ ಅದ್ಭುತ ಕಾರ್ಯವನ್ನು ಮಾಡಿದ್ದಾರೆ ಎಂದು ಆಡಳಿತ ಮಂಡಳಿಯವರು ಗುಣಗಾನ ಮಾಡಿದರು ಈ ವಸ್ತು ಪ್ರದರ್ಶನವನ್ನು ಸಿಂಧನೂರಿನ ಸರ್ಕಾರಿ ಪ್ರಮುಖ ಪ್ರಮುಖ ಉಪನ್ಯಾಸಕರುಗಳಾದ ಹಾಗೂ ಅತಿಥಿ ಉಪನ್ಯಾಸಕರುಗಳಾದ ಶ್ರೀ ನರಸಣ್ಣ ....... ಇವರುಗಳು ಈ ಪ್ರದರ್ಶನವನ್ನು ವೀಕ್ಷಿಸಿ ವಸ್ತು ಪ್ರದರ್ಶನದ ಸಭೆಯನ್ನು ಸವಿದು ಕಾಲೇಜಿನ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಮೆಚ್ಚಿ ಹೊಗಳಿದರು ಸಿಂಧನೂರಿನ ಪ್ರತಿಷ್ಠಿತ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರುಗಳು ಆದ ಆರ್ ಸಿ ಪಾಟೀಲ್ , ಕೃಷ್ಣಾರೆಡ್ಡಿ .......... ಸಿಂಧನೂರಿನ ಎಲ್ಲಾ ಕಾಲೇಜಿನ ಉಪನ್ಯಾಸಕರಾದ ಹೂ ತಾಯಪ್ಪ ನಾಗರಾಜ ಸಾಯಿ ಉಪನ್ಯಾಸಕರು ಭಾಗವಹಿಸಿದ್ದರು.

ಕಾರ್ಯಕ್ರಮಕ್ಕೆ ಆಗಮಿಸಿದ ಪ್ರತಿ ಸದಸ್ಯರು ವಿದ್ಯಾರ್ಥಿಗಳ ಕಾರ್ಯ ಕ್ರಿಯಾಶೀಲತೆ ಮತ್ತು ಇತಿಹಾಸ ಸಾಮ್ರಾಜ್ಯ ದರ್ಶನವನ್ನು ವರ್ಣಿಸಿದ ಮಾಹಿತಿಯನ್ನು ಗುಣಗಾನ ಮಾಡಿದರು. ಆರ್ ಸಿ ಪಾಟೀಲ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಗಳು ದೇಶದ ಭವಿಷ್ಯದ ಸಾಧಕರು ಆಗುವಿರಿ ಎಂದು ಪ್ರಶಂಶಿಸಿದರು. ಸಿಂಧನೂರಿನ ಬೇರೆ ಬೇರೆ ಕಾಲೇಜಿನ ಆಡಳಿತ ಮಂಡಳಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿ ಸಮೂಹ ವರ್ಗ ಪ್ರದರ್ಶನವನ್ನು ವೀಕ್ಷಿಸಿ ಅಭಿನಂದನೆ ಮಾತುಗಳನ್ನಾಡಿ ಪ್ರೋತ್ಸಾಹಿಸಿದ್ದಾರೆ...ನಂತರ ವಸ್ತು ಪ್ರದರ್ಶನದಲ್ಲಿ....ನೋಬೆಲ್ ಚಾಲೆಂಜರ್ಸ್ ಥರ್ಮಕೋಲಿನಿಂದ ಪಾತಾಳೇಶ್ವರ ದೇವಾಲಯ ಮತ್ತು ಅರ್ಕೇಶ್ವರ ದೇವಾಲಯ ವಿವಿಧ ರೀತಿಯ ರಾಜರ ಭಾವಚಿತ್ರಗಳು ಮತ್ತು ದೇವಾಲಯದ ಭಾವಚಿತ್ರಗಳು.

ಮಾರಂತಕ ತಂಡ ವಿಜಯನಗರ ಸಾಮ್ರಾಜ್ಯ 1. ಹೇಮಕೂಟ 2. ಹಂಪಿ ಕಲ್ಲಿನ ರಥ 3. ವಿರೂಪಾಕ್ಷ ದೇವಸ್ಥಾನ 4. ಹಂಪಿ ಮಾರುಕಟ್ಟೆ 5. ಸಾಸುವೆ ಕಾಳು ಗಣೇಶ ಗೌತಮಬುದ್ಧ ತಂಡವಾದ ನಾವು ಈವತ್ತಿನ ಕಾರ್ಯಕ್ರಮದಲ್ಲಿ ಬೌದ್ಧ ಧರ್ಮ ಯನ್ನುವ ವಿಷಯ ತೆಗೆದುಕೊಂಡು ಇದ್ದೆವು ಅದರಲ್ಲಿ ನಾವು ಗೌತಮ ಬುದ್ಧ ಸಾಂಚಿ ಸ್ತುಪಾ ಹಾಗೂ ಬೌದ್ಧ ದೇವಾಲಯವನ್ನು ನಿರ್ಮಿಸಿದ್ದೆವು ಹಾಗೆ ಕೊಠಡಿ ಯನ್ನು ನಿಸರ್ಗ ದತ್ತಾವಾಗಿ ಸಿಂಗರಿಸಿ ಬುದ್ಧನ ಜೀವನ ದಿಂದ ಅವನತಿ ವರೆಗೂ ವಂದು ಕೊಠಡಿಯಲ್ಲಿ ಚಿತ್ರಿಸಿದೇವು ವಿಜಯ ಸಂಭ 1 ಗುಹಾಂತರ ದೇವಾಲಯ 2 ನರ್ಮದಾ ನದಿ ಕಾಳಗ 3 ರಂಗನಾಥ ಸ್ವಾಮಿ ದೇವಾಲಯ 4 ದುರ್ಗಾ ದೇವಾಲಯ 5 ಲಡಾಖನ್ ದೇವಾಲಯ 6 ವಿಜಯ ಸ್ಥಭಾ 7 ಇಮ್ಮಡಿ ಪುಲಿಕೇಶಿ (ವೇಷದಾರಿ) 8 ಆಹಾರ ಪದ್ಧತಿ..... ವರ್ಣ ಯುಗ ತಂಡ. ಗುಪ್ತ ಸಾಮ್ರಾಜ್ಯದ ವಸ್ತು ಪ್ರದರ್ಶನ ಇಂದು ನಮ್ಮ ಕಾಲೇಜಿನಲ್ಲಿ ಇತಿಹಾಸ ಸಾಮ್ರಾಜ್ಯಗಳ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ನಮ್ಮ ತಂಡ ಸುವರ್ಣ ಯುಗ ಗುಪ್ತ ಸಾಮ್ರಾಜ್ಯದ ಶ್ರೇಷ್ಠ ಅರಸನಾದಂತಹ ಸಮುದ್ರ ಗುಪ್ತನ ವೇಷವನ್ನು ಹಾಕಲಾಗಿತ್ತು ಹಾಗೂ ಸೈನಿಕರ ವೇಷವು ಸಹ ಹಾಕಲಾಗಿತ್ತು ನಂತರ ಕೊನೆತ್ರ್ನೂರ ದೇವಾಲಯವನ್ನು ವಸ್ತು ಪ್ರದರ್ಶನ ಮಾಡಲಾಯಿತು.

ಹಾಗೂ ಅಲಹಾಬಾದ್ ಸ್ತಂಭ ಶಾಸನವನ್ನು ಕೂಡ ಪ್ರದರ್ಶನಕ್ಕೆ ಇಡಲಾಗಿತ್ತು ಹಾಗೂ ನಳಂದ ವಿಶ್ವವಿದ್ಯಾಲಯವನ್ನು ಕೂಡ ಪ್ರದರ್ಶನಕ್ಕೆ ಇಡಲಾಗಿತ್ತು ಈ ಕಾರ್ಯಕ್ರಮದಲ್ಲಿ ನೊಬೆಲ್ ಕಾಲೇಜಿನ ಕಾಲೇಜು ಆಡಳಿತ ಮಂಡಳಿ .ಸಿಂಧನೂರಿನ ಬೇರೆ ಬೇರೆ ಕಾಲೇಜಿನ ಆಡಳಿತ ಮಂಡಳಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ... ನೊಬೆಲ್ ಕಾಲೇಜಿನ ಉಪನ್ಯಾಸಕರು , ಬೋಧಕ್ಕೆ ತರ ಸಿಬ್ಬಂದಿ ವಿದ್ಯಾರ್ಥಿಗಳು ಭಾಗವಹಿಸಿದರು...

# ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ರವರಿಗೆ ನುಡಿ ನಮನ




**ನೈಜ್ಯ ದೆಸೆ ನ್ಯೂಸ್**

**ಮರಗಳನ್ನೇ ಮಕ್ಕಳಂತೆ ಸಾಕಿ ಸಲಹಿದ ವೃಕ್ಷಮಾತೆ ಸತಾಯಶೆ ಸಾಲು ಮರದ ತಿಮ್ಮಕ್ಕ ರವರ ನಿಧನಕ್ಕೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಸಿಂಧನೂರು ಹಾಗೂ ನಿವೃತ್ತ ಪಿಂಚಣಿ ನೌಕರರ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.**

ಶನಿವಾರ ಸಂಜೆ ತಹಶೀಲ್ದಾರ ಕಚೇರಿ ಆವರಣದಲ್ಲಿ ನಿವೃತ್ತ ನೌಕರರ ಭವನದಲ್ಲಿ ಎರಡು ಸಂಘಟನೆಗಳಿಂದ ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕ ರವರ ಆತ್ಮಕ್ಕೆ ಶಾಂತಿ ಕೋರಿ ನುಡಿ ನಮನ ಕಾರ್ಯಕ್ರಮವನ್ನು ಸಲ್ಲಿಸಿದರು ಕಾರ್ಯಕ್ರಮದಲ್ಲಿ ನುಡಿ ನಮನ ಸಲ್ಲಿಸಿದ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಚ್ ಎಫ್ ಮಸ್ಕಿ ಮತ್ತು ನಿವೃತ್ತ ನೌಕರ ಹುಸೇನ್ ಬಾಷಾ ಮತ್ತು ಅಧ್ಯಕ್ಷರಾದ ಟಿ ಅಯ್ಯಪ್ಪ ಮಾತನಾಡಿ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದ ಸಾಲು ಮರದ ತಿಮ್ಮಕ್ಕನವರು ಕೆಲದಿನಗಳಿಂದ ವಯೋಸಹಜವಾಗಿ ಅನಾರೋಗ್ಯದಿಂದ ಬಳಲುತ್ತಿದ್ದರು ಉಸಿರಾಟದ ಸಮಸ್ಯೆ ಉಂಟಾಗಿದ್ದ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದಿದ್ದಾರೆ.

ಮಕ್ಕಳಿಲ್ಲದ ತಿಮ್ಮಕ್ಕ ಮರಗಳನ್ನೇ ಮಕ್ಕಳೆಂದು ಸಾಕಿ ಸಲುಹಿದ ತಾಯಿ ಅವರಾಗಿದ್ದರು ಅವರ ಅಂತ್ಯಕ್ರಿಯೆ ಸಕಲ ಸರಕಾರಿ ಸೌಲಬ್ಯದೊಂದಿಗೆ ಕಲಾಗ್ರಾಮದಲ್ಲಿ ನಡೆಯಿತು ಎಂದು ಹೇಳಿದರು, ತಿಮ್ಮಕನ ಕುರಿತು ಚುಟುಕು ಕವನ ವಚನದ ಮೂಲಕ ಕವಿ ನಮನವನ್ನು ಬೀರಪ್ಪ ಶಂಭೋಜಿ ಸಲ್ಲಿಸಿದರು , ಕಾರ್ಯಕ್ರಮದಲ್ಲಿ ಬಸವರಾಜ್ ಬಿ, ಬಿಳೇಕಲ್, ಹುಸೇನಪ್ಪಾ ಅಮರಾಪುರ್, ಪ್ರಭು, ವೆಂಕಟರೆಡ್ಡಿ , ಯಲಪ್ಪ, ರಸೂಲ್ ಅನ್ವರ್ ಮಿಯಾ , ಪ್ರಭು, ಸಿದ್ದೇಶ್ವರಿ, ಶಿವಬಸಪ್ಪ, ಶ್ರೀಶೈಲ ಸೇರಿದಂತೆ ಎರಡು ಸಂಘಟನೆಯ ಮುಖಂಡರು ಇದ್ದರು.

# ವಾಲ್ಮೀಕಿ ವಿಶ್ವವಿದ್ಯಾಲಯದಲ್ಲಿ ವೃಕ್ಷಮಾತೆಗೆ ಸಂತಾಪ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನವೆಂಬರ್ 16 (ಕರ್ನಾಟಕ ವಾರ್ತೆ): ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಹಾಲ್‌ನಲ್ಲಿ ನವೆಂಬರ್ 15ರಂದು ಸಾಲುಮರದ ತಿಮ್ಮಕ್ಕ ಅವರ ನಿಧನಕ್ಕೆ ಮೌನಾಚರಣೆ ಮೂಲಕ ಸಂತಾಪ ಸೂಚಿಸಲಾಯಿತು.ಕುಲಪತಿ ಪ್ರೊ.ಶಿವಾನಂದ ಕೆಳಗಿನಮನಿ ಅವರು ಮಾತನಾಡಿ, ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕನವರು ನಿಧನರಾದ ಸುದ್ದಿ ತಿಳಿದು ವಿಷಾದವಾಯಿತು.**



ಗಿಡ-ಮರಗಳನ್ನು ಬೆಳೆಸುವುದರೊಂದಿಗೆ ಪರಿಸರ ಸಂರಕ್ಷಣೆಗೆ ವಿಶೇಷ ಕಾಳಜಿವಹಿಸಿ ಜೀವಿಸಿದ ಅವರ ಶೈಲಿಯೇ ಎಲ್ಲರಿಗೂ ಪ್ರೇರಣೆಯಾಗಬೇಕು. ಅವರು ಪರಿಸರ ಸಂರಕ್ಷಣೆ ಕುರಿತು ಅರಿವು, ಜಾಗೃತಿ ಮೂಡಿಸುತ್ತಿದ್ದರು. ನಮ್ಮ ನೆಲ ಜಲ ಪರಿಸರ ಇವುಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಸಾಮಾನ್ಯ ಪರಿಸರ ಪ್ರಜ್ಞೆಯ ಅರಿವಾದರೆ ತಿಮ್ಮಕ್ಕನಂತವರನ್ನು ಸ್ಫೂರ್ತಿಯಾಗಿ ಪಡೆದುಕೊಂಡು ನಮ್ಮ ನಾಡ ಭೂಮಿಯನ್ನು ಸದಾ ಹಸಿರಾಗಿಡಬಹುದು. ತಮ್ಮ ಬಹುಪಾಲು ಜೀವಿತ ಕಾಲವನ್ನು ಹಸಿರೇ ಉಸಿರೆಂದು ಭಾವಿಸಿ ಪರಿಸರ ಸೇವೆ ಮತ್ತು ಸಂರಕ್ಷಣೆಗಾಗಿ ಮುಡಿಪಾಗಿಟ್ಟು, ಅಗಲಿದ ಈ ಮಹಾ ಚೇತನಕ್ಕೆ ನಮನಗಳೊಂದಿಗೆ ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತೇನೆ ಎಂದು ತಿಳಿಸಿದರು. ಕುಲಸಚಿವರಾದ ಡಾ.ಎ.ಚನ್ನಪ್ಪ ಅವರು ಮಾತನಾಡಿ, ಸಾಲುಮರದ ತಿಮ್ಮಕ್ಕನವರ ಜೀವನ ಸಾಧನೆ ಸಮಾಜಕ್ಕೆ ಮಾದರಿಯಾಗಿದೆ.

ಅನಕ್ಷರಸ್ಥೆಯಾಗಿದ್ದರೂ ನಿಸರ್ಗದ ಜ್ಞಾನದೊಂದಿಗೆ ಮರಗಳನ್ನೆ ಮಕ್ಕಳೆಂದು ಭಾವಿಸಿ ವೃಕ್ಷವನವನ್ನು ನಿರ್ಮಿಸಿದ್ದಾರೆ. ಅವರು ನಮ್ಮನ್ನಗಲಿದರೂ ನಮ್ಮ ಮನದಾಳದಲ್ಲಿ ಅವರು ಎಂದಿಗೂ ಜೀವಂತವಾಗಿದ್ದಾರೆ. ಅವರ ತ್ಯಾಗಮಯ ಜೀವನ ಮರೆಯಲಾರದ್ದು ಎಂದು ಹೇಳಿದರು. ಉಪಕುಲಸಚಿವರಾದ ಡಾ.ಕೆ.ವೆಂಕಟೇಶ ಅವರು ಮಾತನಾಡಿ, ಮಾಗಡಿ ತಾಲ್ಲೂಕಿನಲ್ಲಿ ರಸ್ತೆ ಬದಿ ಆಲದ ಮರಗಳನ್ನು ನೆಟ್ಟು ಬೆಳೆಸಿದ ಅವರು ಸಾಲುಮರದ ತಿಮ್ಮಕ್ಕ ಎಂದೇ ಚಿರಪರಿಚಿತರಾದರು. ಸಸಿಗಳನ್ನು ಮಕ್ಕಳಂತೆ ಪ್ರೀತಿಯಿಂದ ಸಾಕಿ ಸಲಹಿದ್ದಾರೆ.

ಅವರು ಬದುಕಿದ ದಾರಿ ಎಲ್ಲರಿಗೂ ಮಾದರಿಯಾಗಬೇಕು, ತಾವು ನೆಟ್ಟ ಸಸಿಗಳನ್ನು ತಮ್ಮ ಮಕ್ಕಳೆಂದು ತಿಳಿದು ಅವರು ಜೀವನದ ಸಾರ್ಥಕತೆಯನ್ನು ಕಂಡುಕೊಂಡರು. ಅವರ ಅಗಲಿಕೆ ನಮ್ಮೆಲ್ಲರಿಗೂ ದುಖಃವನ್ನುಂಟು ಮಾಡಿದೆ. ಅವರನ್ನು ಮಾದರಿಯಾಗಿಟ್ಟುಕೊಂಡು ಭವಿಷ್ಯದ ದೃಷ್ಟಿಯಿಂದ ಬರುವ ಪೀಳಿಗೆಗೆ ಅವರ ಪರಿಸರ ಪ್ರೇಮ ಮತ್ತು ಬದುಕಿದ ರೀತಿಯನ್ನು ತೋರಿಸಿಕೊಡಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಹಣಕಾಸು ಅಧಿಕಾರಿ ಡಾ.ಸುಯಮೀಂದ್ರ ಕುಲಕರ್ಣಿ, ಡೀನರಾದ ಪ್ರೊ.ಪಾರ್ವತಿ ಸಿ.ಎಸ್., ಡಾ.ಲತಾ ಎಂ.ಎಸ್., ವಿದ್ಯಾರ್ಥಿ ಕಲ್ಯಾಣಾಧಿಕಾರಿ ಡಾ.ಜಿ.ಎಸ್.ಬಿರಾದಾರ, ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ತಿಮ್ಮಕ್ಕನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಬಿ.ಎ.ಎಂ.ಎಸ್ ಕೋರ್ಸ್

BAMS (Bachelor of Ayurvedic Medicine and Surgery) ಎಂಬುದು ಆಯುರ್ವೇದ ವೈದ್ಯಕೀಯದಲ್ಲಿ ಪದವಿ ಮಟ್ಟದ ಕೋರ್ಸ್ ಆಗಿದೆ. ಇದು ಪ್ರಾಚೀನ ಭಾರತೀಯ ವೈದ್ಯಕೀಯ ಪದ್ಧತಿಯಾದ ಆಯುರ್ವೇದದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಈ ಕೋರ್ಸ್ನ್ನ ಪೂರ್ೈಸಿದ ವಿದ್ಯಾರ್ಥಿಗಳು ಆಯುರ್ವೇದ ವೈದ್ಯರು ಆಗಿ ಕಾರ್ಯನಿರ್ವಹಿಸಬಹುದು. ಭಾರತದ ಒಟ್ಟು 515 ಬಿ.ಎ.ಎಂ.ಎಸ್ ಕಾಲೇಜಗಳು ಕರ್ನಾಟಕದಲ್ಲಿ 101 ಬಿ.ಎ.ಎಂ.ಎಸ್ ಮೆಡಿಕಲ್ ಕಾಲೇಜುಗಳಿವೆ. ರಾಯಚೂರ ಜಿಲ್ಲೆಯಲ್ಲಿ 3 ಬಿ.ಎ.ಎಂ.ಎಸ್ ಕಾಲೇಜುಗಳಿವ.? ಕೋರ್ಸ್ ಅವಧಿ: 5.5 ವರ್ಷಗಳು, 4.5 ವರ್ಷಗಳು: ಶೈಕ್ಷಣಿಕ ಅಧ್ಯಯನ 1 ವರ್ಷ: ಕಡ್ಡಾಯ ಇಂಟರ್ನ್ಶಿಪ್

**ಪ್ರವೇಶ ಅರ್ಹತೆ:** ಅಭ್ಯರ್ಥಿಯು ಪಿಯುಸಿ / 12ನೇ ತರಗತಿಯಲ್ಲಿ ವಿಜ್ಞಾನ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು., ನೀಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಆಯುರ್ವೇದ ಇತಿಹಾಸ ಸಂಸ್ಕೃತ, ಪೌರ್ವಕ ತಂತ್ರ , ಅನಾಟಮಿ ಮತ್ತು ಫಿಸಿಯಾಲಜಿ , ದ್ರವ್ಯಗುಣ , ರಸ ಶಾಸ್ತ್ರ, ಅಗದ ತಂತ್ರ, ಕಾಯಚಿಕಿತ್ಸೆ , ಶಲ್ಯ ಮತ್ತು ಶಲಾಕ್ಯ , ಪ್ರಸೂತಿ ಮತ್ತು ಸ್ತ್ರೀರೋಗ,ಬಾಲರೋಗ ವಿಭಾಗಗಳೀವೆ ಇಂಟರ್ನ್ಶಿಪ್ ಒಂದು ವರ್ಷದ ಇಂಟರ್ನ್ಶಿಪ್ ವೇಳೆ ವಿದ್ಯಾರ್ಥಿಗಳು ಆಯುರ್ವೇದ ಆಸ್ಪತ್ರೆಗಳಲ್ಲಿ ಪ್ರಾಯೋಗಿಕ ತರಬೇತಿ ಪಡೆಯುತ್ತಾರೆ ರೋಗಿಗಳ ಪರೀಕ್ಷೆ, ಔಷಧ ತಯಾರಿ, ಪಂಚಕರ್ಮ ಚಿಕಿತ್ಸೆ ಇತ್ಯಾದಿ. ಬಿ.ಎ.ಎಂ.ಎಸ್ ನಂತರ ವಿದ್ಯಾರ್ಥಿಗಳು ಈ ಕ್ಷೇತ್ರಗಳಲ್ಲಿ ಕೆಲಸ ಮಾಡಬಹುದು: ಆಯುರ್ವೇದ ವೈದ್ಯರು ,ಪಂಚಕರ್ಮ ತಜ್ಞ, ಫಾರ್ಮಾಸಿಸ್ಟ್ / ಮೆಡಿಸಿನ್ ಮ್ಯಾನಿಫ್ಯಾಕ್ಚರರ್, ಗವೇಷಕ ,ಆಸ್ಪತ್ರೆ / ಕ್ಲಿನಿಕ್ ಮಾಲೀಕರು , ಉಪನ್ಯಾಸಕರು / ಪ್ರಾಧ್ಯಾಪಕರು, ಮುಂದಿನ ಅಧ್ಯಯನ ಉನ್ನತ ಶಿಕ್ಷಣ ಎಂ.ಡಿ /ಎಂ ಎಸ್ ಮಾಡಲು ಅವಕಾಶ ಹಾಗೂ ಐ ಎ ಎಸ್ , ಕೆ ಎ ಎಸ್ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅವಕಾಶ.

# 27 ರಿಂದ ಕುಪ್ಪಿಭೀಮ ದೇವರ ಜಾತ್ರಾಮಹೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ನ. 27ರಿಂದ ಡಿ. 7ರವರೆಗೆ ನಡೆಯುವ ಪುರಸಭೆ ವ್ಯಾಪ್ತಿಯ ಕಸಬಾಲಿಂಗಸುಗೂರು ಗ್ರಾಮದ ಕುಪ್ಪಿಭೀಮ ದೇವರ ಜಾತ್ರಾಮಹೋತ್ಸವ ಸಮಾರಂಭ ಯಶಸ್ಸಿಗೆ ಪ್ರತಿಯೊಬ್ಬರೂ ಸಹಕಾರ ನೀಡಬೇಕು' ಎಂದು ತಹಶೀಲ್ದಾರ್ ಸತ್ಯಮ್ಮ ಹೇಳಿದರು.**

ಕಸಬಾಲಿಂಗಸುಗೂರು ಗ್ರಾಮದ ಕುಪ್ಪಿಭೀಮ ದೇವರ ಜಾತ್ರಾಮಹೋತ್ಸವ ಪ್ರಯುಕ್ತ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಕುಪ್ಪಿಭೀಮ ದೇವರ ಜಾತ್ರಾ ಮಹೋತ್ಸವದಂದು ಎಳೆಯುವ ರಥವನ್ನು ಗ್ರಾಮದ ರಥಶಿಲ್ಪಿ ದಿ. ಈರಪ್ಪ ಬಡಿಗೇರ ನಿರ್ಮಿಸಿ 100 ವರ್ಷ ತುಂಬಿದ ನಿಮಿತ್ತ ರಥಶತಮಾನೋತ್ಸವಕ್ಕಾಗಿ ಗ್ರಾಮಸ್ಥರ ಸಹಕಾರದೊಂದಿಗೆ ವಿಶೇಷ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಮಾರಂಭದ ನಿರ್ವಹಣೆಗಾಗಿ ಗ್ರಾಮಸ್ಥರು ಉಪಸಮಿತಿ ರಚಿಸಿದ್ದಾರೆ.

ಸಮಿತಿಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಸೇರಿಸಿಕೊಂಡು ಸಮಾರಂಭವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ರಥೋತ್ಸವಕ್ಕೆ ಹೆಲಿಕ್ಯಾಪ್ಟರ್ ನಿಂದ ಪುಷ್ಪವೃಷ್ಟಿ



ಮಾಡಲಾಗುತ್ತಿದ್ದರಿಂದ, ಅದಕ್ಕೆ ಸುರಕ್ಷತೆ ಬಗ್ಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಪಿಡಬ್ಲೂಡಿ ಅಧಿಕಾರಿಗೆ ಸೂಚಿಸಿದರು. ಜಾತ್ರಾ ಮಹೋತ್ಸವ ಯಶಸ್ಸಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಮನ್ವಯ ಸಾಧಿಸಿ, ಕಾರ್ಯನಿರ್ವಹಿಸಬೇಕು' ಎಂದರು. ಪಿಐ ಪುಂಡಲಿಕ ಪಟತಾರ ಮಾತನಾಡಿ, 'ರಥ-'ೋತ್ಸವದಂದು ಭಕ್ತರ ಸಂಖ್ಯೆ ಹೆಚ್ಚಿರುತ್ತದೆ. ಈ ಹಿನ್ನೆಲೆಯಲ್ಲಿ ವಾಹನ, ಬೈಕ್‌ಗಳ ನಿಲುಗಡೆಗೆ ಪ್ರತ್ಯೇಕ ಪಾರ್ಕಿಂಗ್ ಸ್ಥಳಕ್ಕೆ ವ್ಯವಸ್ಥೆ ಮಾಡಿಕೊಡಿಬೇಕು. ಸೂಕ್ತ ಭದ್ರತೆಗೆ ಮೂರು ದಿನಗಳವರೆಗೆ ದೇವಸ್ಥಾನ ಸಮಿತಿಯಿಂದ 50 ಗೃಹ ರಕ್ಷಕ ದಳ ಸಿಬ್ಬಂದಿ ನಿಯೋಜಿಸಬೇಕು.

ರಥ ಎಳೆಯುವ ಮಾರ್ಗದಲ್ಲಿ ಬ್ಯಾರಿಕೇಡ್ ಹಾಗೂ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಅಗತ್ಯವಿರುವ ಕಡೆಗಳಲ್ಲಿ ಬ್ಯಾರಿಕೇಡ್ ಹಾಕಲು ಸಮಿತಿ ಸಹಕಾರ ನೀಡಬೇಕು. ಅಹಿತಕರ ಘಟನೆಗಳಿಗೆ ಅವಕಾಶ ನೀಡದೇ ಶಾಂತಿಯುತ ಹಾಗೂ ಸಂಭ್ರಮದಿಂದ ಜಾತ್ರಾಮಹೋತ್ಸವ ನಡೆಯಲು ಸಹಕಾರ ನೀಡಬೇಕು ಎಂದು ಹೇಳಿದರು. ಗ್ರಾಮದ ಮುಖಂಡ ರಮೇಶ ತಲೆವಡಕರ ಮಾತನಾಡಿ, 'ನ. 27ರಂದು ಸಂಜೆ 6.30ರಿಂದ ಸುಂದರಕಾಂಡ ಆಂಜನೇಯ ದಿವ್ಯ ಚರಿತ್ರೆ ಕಾರ್ಯಕ್ರಮದಲ್ಲಿ ಕಜ್ಜಿಡೋಣಿ ಶಂಕರಚಾರ್ಯ ಅವಧೂತ ಆಶ್ರಮದ ಕೃಷ್ಣಾನಂದ ಶರಣರು, ಬೆಂಗಳೂರಿನ ಜಗದೀಶ ಶರ್ಮಾ ಸಂಪ ಪ್ರವಚನ ನೀಡಲಿದ್ದಾರೆ.

ಡಿ. 2ರಂದು ಬೆಳಿಗ್ಗೆ 10ಕ್ಕೆ 25 ಜೋಡಿ ಸಾಮೂಹಿಕ ವಿವಾಹ ಹಾಗೂ ಆದಿದೈವ ಕುಪ್ಪಿಭೀಮ ಕೃತಿ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಡಿ. 3ರಂದು ಬೆಳಿಗ್ಗೆ 10 ಗಂಟೆಗೆ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಅಂ-ದು ರಾತ್ರಿ 8 ಗಂಟೆಗೆ ಅಖಂಡ ಭಜನೆ ನಡೆಯಲಿದೆ. ಡಿ. 4ರಂದು ಸಂಜೆ 5 ಗಂಟೆಗೆ ಶತಮಾನ ರಥೋತ್ಸವಕ್ಕೆ ಹೆಲಿಕ್ಯಾಪ್ಟರ್‌ನಿಂದ ಪುಷ್ಪವೃಷ್ಟಿ ನಡೆಯಲಿದೆ. ಮಂತ್ರಾಲಯದ ಸುಬುದೇಂದ್ರತೀರ್ಥರು ಸಾನ್ನಿಧ್ಯ ವಹಿಸಲಿದ್ದಾರೆ.

ಡಿ. 5ರಂದು ಸಂಜೆ 6ರಂದು ಸಮಾರೋಪದಲ್ಲಿ ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಡಿ. 6ರಂದು ಸಂಜೆ 5ಕ್ಕೆ ಕಡುಬಿನ ಕಾಳಗ ಉಚ್ಛಾಯ ಉತ್ಸವ ಹಾಗೂ ಹಾಸ್ಯ ಕಾರ್ಯಕ್ರಮ ನಡೆಯಲಿದೆ. ಡಿ. 7ರಂದು ಗದಗ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಕಲ್ಲಯ್ಯ ಅಜ್ಜನವರಿಗೆ ಭಕ್ತರಿಂದ ತುಲಾಭಾರ ಹಾಗೂ ಕುಮಾರೇಶ್ವರ ಕೃಪಾ ಪೋಷಿತ ಪಂಡಿತ ಪಂಚಾಕ್ಷರಿ ಗವಾಯಿ ನಾಟ್ಯಸಂಘದಿಂದ ನಾಟಕ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

# ಕವಿತಾಳ ಪೊಲೀಸ್ ಠಾಣೆಗೆ ಕೇಂದ್ರ ಪ್ರಶಸ್ತಿ SP ಎಂ.ಪುಟ್ಟಮಾದಯ್ಯ ಸಂತಸ



ಕವಿತಾಳ ಪೊಲೀಸ್ ಠಾಣೆಗೆ ಕೇಂದ್ರ ಪ್ರಶಸ್ತಿ ದೊರಕಿರುವುದು ಸಂತಸ ಮತ್ತು ಹೆಮ್ಮೆಯ ಸಂಗತಿ, ಇದರಿಂದಾಗಿ ಜಿಲ್ಲೆಯ ಪೊಲೀಸ್ ವ್ಯವಸ್ಥೆಗೆ ಇನ್ನಷ್ಟು ಬಲ ತುಂಬಿದಂತಾಗಿದೆ, ಠಾಣೆಯ ಪ್ರಗತಿಗೆ ಇಲ್ಲಿಯವರೆಗೆ ಕರ್ತವ್ಯ ನಿರ್ವಹಿಸಿದ ಠಾಣಾಧಿಕಾರಿಗಳ ಮತ್ತು ಸಿಬ್ಬಂದಿಗಳ ಕಾರ್ಯದಕ್ಷತೆಗೆ ಸಿಕ್ಕ ಪ್ರತಿಫಲವಾಗಿದೆ

**ಎಂ.ಪುಟ್ಟಮಾದಯ್ಯ**
**ಜಿಲ್ಲಾ ಪೊಲಿಸ್ ವರೀಷ್ಠಾಧಿಕಾರಿ ರಾಯಚೂರು**



"36 ವರ್ಷ ಸೇವೆ ಸಲ್ಲಿಸಿದ ನನಗೆ ಇನ್ನೂ 8 ತಿಂಗಳು ನಿವೃತ್ತಿ ಅವದಿ ಉಳಿದಿದ್ದು ಈ ಸಂದರ್ಭದಲ್ಲಿ ಕೇಂದ್ರ ಪ್ರಶಸ್ತಿಯನ್ನು ಸ್ವೀಕರಿಸುತತಿರುವುದು ಸಂತಸ ತಂದಿದೆ,ಈ ಪ್ರಶಸ್ತಿಯು ಠಾಣಾ ವ್ಯಾಪ್ತಿಯ ಜನತೆಯ ಮತ್ತು ಇಲ್ಲಿನ ಸಿಬ್ಬಂದಿಗಳ ಸಹಕಾರದ ಪ್ರತಿಫಲವಾಗಿದೆ "

**ಗುರುಚಂದ್ರ ಯಾದವ್ ಪಿಎಸ್‌ಐ ಕವಿತಾಳ**

## ಕವಿತಾಳ ದೇಶದ ಅತ್ಯುತ್ತಮ ಪೊಲೀಸ್ ಠಾಣೆಯಲ್ಲಿ ತೃತಿಯ ಸ್ಥಾನ ಸ್ಥಳೀಯ ಮುಖಂಡರ ಹರ್ಷ



ವಿಶೇಷವಾಗಿ ನಮ್ಮ ಕಲ್ಯಾಣ ಕರ್ನಾಟಕ ಸೂಫಿ ಸಂತರ ನಾಡು ಶರಣರ ಬೀಡು. ಇದು ಅನೇಕ ಶರಣರು ಸಂತರು ನೆಲೆಸಿರುವಂತಹ ನಾಡು ಕವಿತಾಳಕ್ಕೆ ದೇಶದ ಅತ್ಯುತ್ತಮ ಪೊಲೀಸ್ ಠಾಣೆಯಲ್ಲಿ ತೃತಿಯ ಸ್ಥಾನ ಪ್ರಶಸ್ತಿ ಪಡೆದಿರುವಂತಹದ್ದು ಹೆಮ್ಮೆಯ ವಿಷಯ.

**ಬಿ ಅಬ್ದುಲ್ ಕರೀಂ ಸಾಬ. ಶಿಕ್ಷಣ ಪ್ರೇಮಿ, ಖ್ಯಾತ ಉದ್ಯಮಿಗಳು. ಕವಿತಾಳ**



ದೇಶ ಸೇವೆ ಈಶ ಸೇವೆಗಿಂತಲೂ ಮೇಲು ಎಂದು ಭಾವಿಸಿ ಕವಿತಾಳ ಪೊಲೀಸ್ ಠಾಣೆಯ ಸರಹದ್ದಿನ ಜನರ ಮಾನಪ್ರಾಣ ಆಸ್ತಿಯನ್ನು ಕಾಪಾಡಿಕೊಳ್ಳುತ್ತಾ ಬಂದಿರುವ ಪೊಲೀಸ್ ಠಾಣೆ ಕವಿತಾಳಕ್ಕೆ ದೇಶದ 3 ನೇ ಅತ್ಯುತ್ತಮ ಆರಕ್ಷಕ ಠಾಣೆ ಎಂದು ಪ್ರಶಸ್ತಿ ಬಂದಿರುವುದು ಆ ಠಾಣೆಯ ಸಬ್ ಇನ್ಸ್ಪೆಕ್ಟರ್ ಮತ್ತು ಸಕಲ ಆರಕ್ಷಕ ಸಿಬ್ಬಂದಿಯವ-ರಿಗೆ ಸಂದ ಗೌರವವಾಗಿದೆ.

**ಅಮರೇಶ ಹೂಗಾರ**
**ಶಿಕ್ಷಕರು**



ನಮ್ಮೂರ ಕವಿತಾಳ ಪೊಲೀಸ್ ಠಾಣೆ ದೇಶದ ಅತ್ಯುತ್ತಮ ಮಾದರಿ ಮೂರನೆಯ ಪೊಲೀಸ್ ಠಾಣೆಯಾಗಿ ಆಯ್ಕೆಯಾಗಿರುವುದು ನಮಗೆ ಹೆಮ್ಮ ಮತ್ತು ಸಂತೋಷದ ವಿಷಯ. ಇದು ಇನ್ನಷ್ಟು ಸಾರ್ವಜನಿಕ ಸೇವೆಯನ್ನು ಮತ್ತು ಪೊಲಿಸ್ ಇಲಾಖೆಯ ಅಧಿಕಾರಿಗಳ ಜವಾಬ್ದಾರಿಯನ್ನು ಹೆಚ್ಚಿಸಿದೆ. ಪೊಲಿಸರು ಮತ್ತಷ್ಟು ಹೆಚ್ಚಿನ ಸೇವೆಯನ್ನು ನೀಡಿ ನೊಂದ ಬಂದ ಎಲ್ಲರಿಗೂ ನ್ಯಾಯ ಒದಗಿಸಲಿ ಮತ್ತು ಠಾಣಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿ ಸಾರ್ವಜನಿಕರ ಹಿತ ಕಾಯುವಂತೆ ಆಗಿ ಪೊಲೀಸ್ ಎಂದರೆ ಭಯ ಅಲ್ಲ ಭರವಸೆ ಎಂಬುದನ್ನು ಮತೆ ಮತೆ ಸಾಬೀತು ಮಾಡಲಿ.

**ಶಿವಕುಮಾರ ಮ್ಯಾಗಳಮನಿ ವಕೀಲರು ಹಾಗೂ ಸಾಮಾಜಿಕ ಹೋರಾಟಗಾರರು**

## ಪತ್ನಿಗೆ ವಿಡಿಯೋ ಕಾಲ್ ಮಾಡಿ ಲೈವ್‌ನಲ್ಲೇ ನೇಣು ಬಿಗಿದುಕೊಂಡು ಪತಿ ಆತ್ಮಹತ್ಯೆ

❑ ನೈಜ್ಯ ದೆಸೆ ನ್ಯೂಸ್

**ಮಡಿಕೇರಿ: ವಿಡಿಯೋ ಕಾಲ್ ಮೂಲಕ ತನ್ನ ಪತ್ನಿಗೆ ಕರೆ ಮಾಡಿ ನೇಣು ಬಿಗಿದುಕೊಂಡು ಪತಿ ಆತಹತ್ಯೆ ಮಾಡಿಕೊಂಡಿರುವ ಘಟನೆ ಮಡಿಕೇರಿ ಸಮೀಪದ ಸಿಂಕೋನ ಪ್ರದೇಶದಲ್ಲಿ ನಡೆದಿದೆ.**



ಸೋಮವಾರಪೇಟೆ ತಾಲೂಕಿನ ಕಿಬ್ಬೆಟ್ಟ ನಿವಾಸಿ ಕೀರ್ತನ್ (36) ಆತಹತ್ಯೆ ಮಾಡಿಕೊಂಡ ವ್ಯಕ್ತಿ. ಕಳ್ಳತನ ಪ್ರಕರಣದಲ್ಲಿ ಜೈಲು ಸೇ-ರಿದ್ದ ಕೀರ್ತನ್ ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಈ ನಡುವೆ ಪತಿ ಜೈಲಿಗೆ ಹೋದ ಸಂದರ್ಭದಲ್ಲಿ ಪತ್ನಿ ಜ್ಯೋತಿ ತವರು ಮನೆ ಹೋಗಿದ್ದರು.ನಿನ್ನೆ ಪತ್ನಿಗೆ ಕರೆ ಮಾಡಿ ಆಕೆಯ ಮನೆಗೆ ಹೋಗಿದ್ದಾನೆ. ಎಷ್ಟೇ ಕರೆದರೂ ಪತ್ನಿ ಬರಲು ನಿರಾಕರಿಸಿದ್ದು ಅಲ್ಲಿಂದ ಓಡಿಸಲಾಗಿದೆ. ಇದರಿಂದ ಮನನೊಂದ ಪತಿ ನಿನ್ನೆ ಸಂಜೆ ವೀಡಿಯೋ ಕಾಲ್ ಮಾಡಿ ಕೀರ್ತನ್ ಆತ ಹತ್ಯೆ ಮಾಡಿಕೊಂಡಿದ್ದಾರೆ. ಇಂದು ಮೃತದೇಹ ಪತ್ತೆಯಾಗಿದ್ದು, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೇರಳ ಪೊಲೀಸರಿಂದ ಹೆಚ್ಚಿನ ಅಶ್ರುವಾಯು ಮದ್ದುಗುಂಡುಗಳ ಖರೀದಿ

❑ ನೈಜ್ಯ ದೆಸೆ ನ್ಯೂಸ್

**ಕೊಚ್ಚಿ: ಪ್ರತಿಭಟನೆ ವೇಳೆ ಹಿಂಸಾಚಾರ ತಪ್ಪಿಸಲು ಮತ್ತು ಗುಂಪು ಚದು-ರಿಸಲು ಬೇಕಾಗುವ ವಸ್ತು ಸೇರಿ ಹೆಚ್ಚುವ-ರಿಯಾಗಿ ಅಶ್ರುವಾಯು ಮದ್ದುಗುಂಡುಗಳನ್ನು ಕೇರಳ ಪೊಲೀಸರು ಖರೀದಿಸಲಿದ್ದಾರೆ.**

ಪೊಲೀಸರ ಕೋರಿಕೆಯ ಮೇರೆಗೆ ರಾಜ್ಯ ಸರ್ಕಾರವು 7,500 ಅಶ್ರುವಾಯು ಮದ್ದುಗುಂಡುಗಳನ್ನು ಖರೀದಿಸಲು ಅನುಮೋದನೆ ನೀಡಿದೆ ಎಂದು ಅಧಿಕಾ-ರಿಯೊಬ್ಬರು ತಿಳಿಸಿದ್ದಾರೆ. ಗೃಹ ಇಲಾಖೆಯ ಆದೇಶದ ಪ್ರಕಾರ, ಮಧ್ಯಪ್ರದೇಶದ ಗ್ವಾಲಿಯರ್‌ನ ತೇಕನ್‌ಪುರದಲ್ಲಿರುವ ಗಡಿ ಭದ್ರತಾ ಪಡೆ



(ಬಿಎಸ್‌ಎಫ್)ಯ ಘಟಕದಿಂದ 77.13 ಲಕ್ಷ ರೂ. ಮೌಲ್ಯದ ಮದ್ದುಗುಂಡುಗಳನ್ನು ಖರೀದಿಸಲು ಅನುಮತಿ ನೀಡಲಾಗಿದೆ. ಪೊಲೀಸ್ ಪ್ರಧಾನ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು, ಜಿಲ್ಲೆಯ ಸಶಸ್ತ್ರ ಮೀಸಲು ಶಿಬಿರಗಳು ಟಿಯರ್ ಸೋಕ್ ಮದ್ದುಗುಂಡುಗಳನ್ನು ನಿರ್ವಹಿಸುತ್ತವೆ ಎಂದು ಹೇಳಿದರು. ಖಾಲಿಯಾಗಿರುವ ಕಾರಣ ನಾವು ಹೆಚ್ಚಿನ ಮದ್ದುಗುಂಡುಗಳ ಬೇಡಿಕೆ ಇಟ್ಟಿದ್ದು ನಿಯಮಿತವಾಗಿ, ನಾವು ಅದನ್ನು ಬಿಎಸ್‌ಎಫ್‌ನಿಂದ ಖರೀದಿಸುತ್ತೇವೆ ಎಂದು ಅವರು ಹೇಳಿದರು.

ಕಳೆದ ತಿಂಗಳು, ಕೋಝಿಕ್ಕೋಡ್ ಪೊಲೀಸರು ಪೆರಂಬ್ರಾದಲ್ಲಿ ಸಂಸದ ಶಫಿ ಪರಂಬಿಲ್ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರ ಗುಂಪನ್ನು ಚದುರಿಸಲು ಅಶ್ರುವಾಯು ಮತ್ತು ರಬ್ಬರ್ ಗುಂಡು ಬಳಸಲಾಗಿತ್ತು. ಇದರಿಂದಾಗಿ ಹಲವರಿಗೆ ಗಾಯಗಳಾಗಿವೆ. ಕೇರಳ ಪೊಲೀಸ್‌ರ ಪ್ರಕಾರ, ಗುಂಪುಗಳನ್ನು ಚದುರಿಸಲು ಅಶ್ರುವಾಯು ಬಳಸಬಹುದು. ಅಶ್ರುವಾಯು ಯಾವುದೇ ದೈಹಿಕ ಗಾಯವನ್ನು ಉಂಟುಮಾಡುವುದಿಲ್ಲ ಮತ್ತು ಪೀಡಿತ ವ್ಯಕ್ತಿಗಳು ತಾಜಾ ಗಾಳಿಯಲ್ಲಿ ಸುಮಾರು ಅರ್ಧ ಗಂಟೆ ಚೇತರಿಸಿಕೊಳ್ಳುತ್ತಾರೆ ಎಂದು ಹೇಳುತ್ತದೆ. ಕೆಲವೊಮ್ಮೆ ಅಶ್ರುವಾಯು, ಲಾಠಿ ಚಾರ್ಜ್ ಅಥವಾ ಎರಡನ್ನೂ ಬಳಸುವುದು ಅನುಚಿತವಾಗಿದ್ದರೆ ಅಥವಾ ಅವರ ಉದ್ದೇಶದಲ್ಲಿ ವಿಫಲವಾದರೆ, ಪೊಲೀಸರು ಬಂದೂಕುಗಳ ಬಳಕೆಯನ್ನು ಆಶ್ರಯಿಸಬಹುದು. ಪೊಲೀಸ್ ತರಬೇತಿ ಕಾಲೇಜಿನಲ್ಲಿ ಒಂದು ತಿಂಗಳ ಅವಧಿಯ ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳಿಗೆ ಅಶ್ರುವಾಯು ಮತ್ತು ಲಾಠಿಗಳನ್ನು ಬಳಸುವುದು ಸೇರಿದಂತೆ ಗುಂಪು ಚದುರುವಿಕೆಯಲ್ಲಿ ತರಬೇತಿ ನೀಡಲಾಗುತ್ತದೆ.

# ದೇವದುರ್ಗ ತಾಲೂಕು ನೂತನ ನ್ಯಾಯಾಲಯಗಳ ಸಂಕೀರ್ಣ, ವಕೀಲರ ಭವನ ನ್ಯಾಯಮೂರ್ತಿಗಳಿಂದ ಲೋಕಾರ್ಪಣೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 15 (ಕ.ವಾ.): ದೇವದುರ್ಗ ತಾಲೂಕು ನೂತನ ನ್ಯಾಯಾಲಯಗಳ ಸಂಕೀರ್ಣವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳಾದ ವಿಭು ಬಖ್ರು ಅವರು ನವೆಂಬರ್ 15 ರಂದು ಲೋಕಾರ್ಪಣೆ ಮಾಡಿದರು.**

ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ ಮತ್ತು ನ್ಯಾಯವಾದಿಗಳ ಸಂಘದ ಸಹಯೋಗದಲ್ಲಿ ದೇವದುರ್ಗ-ಜಾಲಹಳ್ಳಿ ರಸ್ತೆಯ ನೂತನ ನ್ಯಾಯಾಲಯದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ನ್ಯಾಯಮೂರ್ತಿಗಳು, ತ್ವರಿತ ನ್ಯಾಯಧಾನವು ಇಂದಿನ ಅತ್ಯಗತ್ಯವಾಗಿದೆ. ಈ ಬಗ್ಗೆ ಎಲ್ಲ ನ್ಯಾಯಾಧೀಶರು ಮತ್ತು ವಕೀಲರು ಗಮನ ಹ-ರಿಸಬೇಕು. ಹೊಸ ಕಟ್ಟಡಗಳ ನಿರ್ಮಾದಂತಹ ಕಾರ್ಯಗಳ ಮೂಲಕ ನ್ಯಾಯಾಂಗ ಇಲಾಖೆಯು ಬಲಗೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.



ನೂತನ ವಕೀಲರ ಭವನ ಉದ್ಘಾಟಿಸಿದ ವಿಶ್ರಾಂತ ನ್ಯಾಯಮೂರ್ತಿಗಳಾದ ಗೌರವಾನ್ವಿತ ಶಿವರಾಜ ವಿ ಪಾಟೀಲ ಅವರು ಮಾತನಾಡಿ, ಈ ನೂತನ ನ್ಯಾಯಾಲಯಗಳ ಸಂಕೀರ್ಣ ಕಟ್ಟಡವು ನಿಜವಾದ ಅರ್ಥದಲ್ಲಿ ನ್ಯಾಯ ದೇವಾಲಯ ಆಗಬೇಕು. ಸೋತವನಿಗೂ ಸಮಾಧಾನ ಆಗುವ ರೀತಿಯಲ್ಲಿ ಇಲ್ಲಿ ನ್ಯಾಯಧಾನ ಸಿಗಬೇಕು.

ಜನರಿಗೆ ನ್ಯಾಯ ಕೊಡಿಸುವ ಕಾರ್ಯ ಇಲ್ಲಿನ ಎಲ್ಲ ವಕೀಲರಿಂದ ನ್ಯಾಯಾಧೀಶ-ರಿಂದ ಆಗಬೇಕು ಎಂದು ಸಲಹೆ ಮಾಡಿದರು. ವಿಶೇಷವಾಗಿ, ರಾಜ್ಯದಲ್ಲೇ ಅತಿ ಎತ್ತರದ ಪ್ರದೇಶದಲ್ಲಿ ದೇವದುರ್ಗ ನ್ಯಾಯಾಲಯಗಳ ಸಂಕೀರ್ಣ ಕಟ್ಟಡವು ನಿರ್ಮಾಣವಾಗಿ ಗಮನ ಸೆಳೆಯುತ್ತಿರುವುದಕ್ಕೆ ಸ್ಥಳೀಯ ಶಾಸಕರಿಗೆ, ಕಟ್ಟಡ ನಿರ್ಮಾಣಕ್ಕೆ ಶ್ರಮಿಸಿದ ಎಲ್ಲ ಮಹನಿಯ-ರಿಗೆ ಅಭಿನಂದನೆ ತಿಳಿಸುವೆ ಎಂದರು. ವಕೀಲರು ನ್ಯಾಯಯುತ ಮಾರ್ಗದಲ್ಲಿ ಹಣ ಗಳಿಸಲಿ. ಆದರೆ, ಬಡವರು ಬಂದಾಗ ಹಣದ ವ್ಯಾಮೋಹ ಬಿಟ್ಟು ಕೆಲಸ ಮಾಡಬೇಕು ಎಂದು ವಕೀಲರಿಗೆ ಸಲಹೆ ಮಾಡಿದರು.

ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರಿಗೆ ಆತ್ಮಸಾಕ್ಷಿಯೇ ಅವರ ಕಾವಲುಗಾರ ಎಂದು ತಿಳಿಸಿದ ನ್ಯಾ.ಪಾಟೀಲ ಅವರು, ತ್ವರಿತ ನ್ಯಾಯದಾನ ಮತ್ತು ಗುಣಮಟ್ಟದ ನ್ಯಾಯದಾನಕ್ಕೆ ದೇವದುರ್ಗ ನ್ಯಾಯಾಲಯ ರಾಜ್ಯದಲ್ಲಿ ಹೆಸರು ಮಾಡಬೇಕು ಎಂಬುದು ತಮ್ಮ ಆಶಯವಾಗಿದೆ ಎಂದು ಸಲಹೆ ಮಾಡಿದರು. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ರಾಯಚೂರು ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಗೌರವಾನ್ವಿತ ಎಂ.ಜಿ.ಶುಕುರೆಕಮಲ್ ಅವರು ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಗೌರವಾನ್ವಿತ ರಾಯಚೂ-ರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಮಾರುತಿ ಬಾಗಡೆ, ಕರ್ನಾಟಕ ಹೈಕೋರ್ಟ್ನ ರಿಜಿಸ್ಟ್ರಾರ್ ಜನರಲ್ ಕೆ.ಎಸ್. ಭರತ್ ಕುಮಾರ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹೆಚ್.ಶಶಿಧರ ಶೆಟ್ಟಿ, ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷರಾದ ಮಿಟ್ಟಲಕೋಡ ಎಸ್ ಎಸ್., ಜಿಲ್ಲಾಧಿಕಾರಿ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರಾದ ಹೆಚ್.ಎ.ಸಾತ್ವಿಕ್, ವಕೀಲರ ಸಂಘದ ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನ್, ಕೆಎಸ್‌ಎಲ್‌ಎಸ್‌ಎದ ಉಪ ಕಾರ್ಯದರ್ಶಿ ಶ್ರೀಧರ ಎಂ ಹಾಗೂ ದೇವದುರ್ಗ ವಕೀಲರ ಸಂಘದ ಅಧ್ಯಕ್ಷರಾದ ಶುಕುಮುನಿರೆಡ್ಡಿ ನಾಯಕ, ಪ್ರಧಾನ ಕಾರ್ಯದರ್ಶಿ ಚೆನ್ನಪ್ಪ ಗೆಜ್ಜೆಬಾವಿ, ಲೋಕೋಪಯೋಗಿ ಇಲಾಖೆಯ ಅಭಿಯಂತರರಾದ ವೆಂಕಟೇಶ ಗಳಗ, ದೇವದುರ್ಗ ನ್ಯಾಯಾಲಯದ ನ್ಯಾಯಾಧೀಶರಾದ ಸುರೇಶ ಅಪ್ಪಣ್ಣ ಸೌದಿ, ರಫಿಕ್ ಅಹ್ಮದ್, ಹಿರಿಯ ನ್ಯಾಯವಾದಿಗಳಾದ ವಿ ಎಂ ಮೇಟಿ, ವೇಣುಗೋಪಾಲ ಪಾಟೀಲ ಜಾಲಹಳ್ಳಿ, ಪ್ರಕಾಶ ಅಬಕಾರಿ, ಶರಣಬಸವ ಪಾಟೀಲ, ಬಸವರಾಜ ಎಸ್, ಹನುಮಂತರಾಯ ಚಿಂತಲಕುಂಟ ಹಾಗೂ ಇನ್ನಿತರ ವಕೀಲರು ಇದ್ದರು.



**ದೇವದುರ್ಗ ತಾಲೂಕಿನಲ್ಲಿ ನ್ಯಾಯಾಲಯಗಳ ಸಂಕಿರಣ ಹಾಗೂ ವಕೀಲರ ಭವನ ನಿರ್ಮಾಣವಾಗಿರುವುದರಿಂದ ಅನೇಕ ಜನರಿಗೆ ಇದರಿಂದ ಲಾಭವಾಗುತ್ತದೆ. ಇದು ದೇವದುರ್ಗ ತಾಲೂಕಿನ ಹೆಮ್ಮೆಯಾಗುತ್ತದೆ.**

**ಸುಕುಮನಿ ರೆಡ್ಡಿ ಅಧ್ಯಕ್ಷರು ದೇವದುರ್ಗ ನ್ಯಾಯವಾದಿಗಳ ಸಂಘ.**

ವಕೀಲರಾದ ಬಸವರಾಜ ಗಾಣದಾಳ ಹಾಗೂ ಬಸನಗೌಡ ದೇಸಾಯಿ ಅವರು ನಿರೂಪಿಸಿದರು.